# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-260/2016/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 19/07/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ ಶ್ರೀ. **ಜ್ಞಾನಪ್ರಕಾಶ,** ಅಬಕಾರಿ ನಿರೀಕ್ಷಕರು, ಚನ್ನರಾಯಪಟ್ಟಣ ವಲಯ, ಹಾಸನ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1600/2015/ಉನಿವಿ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 16/05/2016.
2. ಸರ್ಕಾರದ ಆದೇಶ ಸಂಖ್ಯೆ: ಆಇ 51 ಇಪಿಎಸ್ 2016, ಬೆಂಗಳೂರು, ದಿನಾಂಕ: 11/07/2016.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/260/2016, ಬೆಂಗಳೂರು ದಿನಾಂಕ: 23/07/2016.
4. Order No.UPLOK-2/DE/2017 Bengaluru Dated: 4.7.2017 file transferred from ARE-1 to ARE-7.
5. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಮಾನ್ಯ ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಹಾಸನ ಲೋಕಾಯುಕ್ತ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ

"ತನಿಖಾಧಿಕಾರಿ" ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ್ದು, ಸದರಿ ವರದಿಯನ್ವಯ **ಶ್ರೀ. ಜ್ಞಾನಪ್ರಕಾಶ,** ಅಬಕಾರಿ ನಿರೀಕ್ಷಕರು, ಚನ್ನರಾಯಪಟ್ಟಣ ವಲಯ, ಹಾಸನ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ "ಆ.ಸ.ನೌ" ಎಂದು ಕರೆಯಲ್ಪಡುತ್ತಾರೆ) ರವರು ದೂರುದಾರಾದ **ಶ್ರೀ. ಹೆಚ್.ಎಂ ಗಿರೀಶ್** ಬಿನ್ ಮಸ್ತಿಗೌಡ, ಕದಂಬ ಗ್ರೂಪ್, ಚನ್ನರಾಯಪಟ್ಟಣ, ಹಾಸನ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು, ತನಿಖೆಯನ್ನು ಕೈಗೊಂಡಿದ್ದು ಇರುತ್ತದೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 11/07/2016ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 23/07/2016 ರಂದು ಅಪರ ನಿಬಂಧಕರು, ವಿಚಾರಣೆಗಳು-1 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-1 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-7 ರವರಿಗೆ ವರ್ಗಾವಣೆಗೊಂಡಿರುತ್ತದೆ. ನಂತರ ಉಲ್ಲೇಖ (5) ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ಶ್ರೀ. ಜ್ಞಾನಪ್ರಕಾಶ, ಅಬಕಾರಿ ನಿರೀಕ್ಷಕರು, ಚನ್ನರಾಯಪಟ್ಟಣ ವಲಯ, ಹಾಸನ ಜಿಲ್ಲೆ ರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು ವಿಚಾರಣೆಗಳು-1 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 20/08/2016 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ

You DGO Sri. Jnanaprakash, while working as Excise Inspector, Channarayapatna, Hassan District (hereinafter called as Delinquent Government Official **[DGO]** for short) had demanded bribe of Rs.10,00,000/- from Sri. H.M Girish S/o Masthigowda, Prop: Kadamba Bar, Channarayapatna on 30/08/2014 for not registering case against him in respect of liquor bottles in his Kadamba Bar and after negotiation, you had agreed to receive Rs.2,00,000/- for the said purpose and again on 04/09/2014 you demanded and accepted bribe of Rs.2,00,000/- from him by asking him to handover the amount to your jeep driver Sri. Manjunath near Old Bus-stand, Channarayapatna and therefore you the DGO has failed to maintain absolute integrity and devotion to duty and committed an act which is

unbecoming of a Government Servant and therefore you are guilty of committing misconduct under Rule 3(1)(i) to (iii) of KCS (Conduct) Rules 1966. Hence, this charge.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸಕಾಂಡೆಕ್ಟ್)

On the basis of a complaint filed by one Sri. H.M Girish S/o Masthigowda, Prop: Kadamba Bar, Channarayapatna (hereinafter referred to as **"Complainant"** for short), this complaint was registered against Sri. Jnanaprakash, Excise Inspector, Channarayapatna, Hassan District (hereinafter referred to as **"Respondent"** for short) is No.COMPT/UPLOK/MYS/1660/2015 and investigation was taken up by invoking Section 9 of Karnataka Lokayukta Act, 1984 against respondent.

2) **Brief facts of the complaint:-**

a) According to the complainant:- On 30/08/2014, respondent visited the shop of complainant and loosened the caps of two liquor bottles and informed the complainant

that, he would seized the liquor stock by filing case against him. The complainant approached respondent in the evening and stated that he is running business legally, but respondent demanded bribe of Rs.10 lakhs and after bargain, demanded at least Rs.2 lakhs for not filing the case against the complainant.

b) Since the complainant was not willing to pay the amount, he approached Police Inspector, Karnataka Lokayukta, Hassan on 03/09/2014 and produced conversation recorded on voice recorder as to the demand of bribe amount made by respondent and lodged the complaint, the Police Inspector, Karnataka Lokayukta, Hassan registered a case against respondent in Crime No.18/2014 for the offences punishable under Section 7, 13(1)(d) r/w 13(2) of P.C. Act 1988.

c) Therefore, on 04/09/2014, at about 10-40 a.m., the complainant approached respondent in his office. At that time, respondent did not receive the bribe amount at his office, however, respondent directed the complainant to give the bribe amount outside the office. Accordingly respondent, along with his driver

Manjunath Urf Manja came near old bus stand of Channarayapatna at about 10-15 a.m. in a car bearing Registration No.KA-13/G-635 and stopped the car near the old bus stand and respondent instructed said driver Manjunath Urf Manja to get down from the car and received bribe amount of Rs.2 lakhs from the complainant on behalf of respondent, in the presence of shadow witness.

d) Then said driver Manjunath Urf Manja was caught hold/trapped when found in possession of the tainted (bribe) amount on the said date and at said place, and the same was seized under a mahazar by the said I.O. in the presence of shadow witness.

e) Added to that, respondent had failed to give any satisfactory account or explanation or reply for the said tainted amount (found with said driver Manjunath Urf Manja) then, when questioned by the said I.O.

f) Even there are statements of witnesses, including complainant, besides material and records filed by the said I.O. in connection with his said repeated misconduct.

3) On the basis of said facts and material on record show that the respondent being a Government Servant, has failed to maintain absolute integrity besides devotion to duty and acted in a manner unbecoming of a Government Servant, and thereby repeatedly committed misconduct and made themselves liable for disciplinary action.

4) Said facts supported by the material on record show that the respondent, being Government Servant, has failed to maintain absolute integrity besides devotion to duty and acted in a manner unbecoming of Government Servant, and thereby repeatedly committed misconduct and made he himself liable for disciplinary action.

5) Therefore, investigation was taken up against the respondent and an observation note was sent to him to show cause as to why recommendation should not be made to the competent authority for initiating departmental enquiry against him. For that, the respondent gave the reply. However, on considering the same, it has not been found convincing to drop the proceedings.

6) Since said facts and material on record prima-facie show that, the respondent has committed grave misconduct, now, acting under Section 12(3) of

B

Karnataka Lokayukta Act, recommendation is made to the Competent Authority to initiate disciplinary proceedings against the respondent for misconduct under Rule 3(1)(i) to (iii) of KCS (Conduct) Rules 1966 the Government after considering of materials, has entrusted enquiry to Hon'ble Upalokayukta. Hence, the charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 06/10/2016 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ದೋಷಾರೋಪಣೆಯಲ್ಲಿ ಹೇಳಿದ ಎಲ್ಲಾ ವಿಷಯವು ಸತ್ಯಕ್ಕೆ ದೂರವಾಗಿದ್ದು, ತಾನು ದೂರುದಾರರಿಂದ ಲಂಚದ ಹಣ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ಪಡೆದುಕೊಂಡಿರುವುದಿಲ್ಲ ಎಂದು ಹೇಳಿರುತ್ತಾರೆ. ಮುಂದುವರೆದು, ದಿನಾಂಕ: 30/08/2014 ರಂದು ತಾನು ದೂರುದಾರರ ಅಂಗಡಿಗೆ ಭೇಟಿ ನೀಡಿರುವುದಿಲ್ಲ, ಆ ದಿವಸ ತಾನು ಅಬಕಾರಿ ಜಂಟಿ ಆಯುಕ್ತರು, ಹಾಸನ ಇವರು ಮೀಟಿಂಗ್ ಇಟ್ಟುಕೊಂಡಿದ್ದು, ಅದಕ್ಕೆ ಹಾಜರಾಗಲು ಹೋಗಿದ್ದೆ ಅಂತಾ ಹೇಳಿರುತ್ತಾರೆ. ಮುಂದುವರೆದು, ಮೀಟಿಂಗ್‌ಗೆ

ಹಾಜರಾಗಿದ್ದಲ್ಲದೇ ಶ್ರೀ. ಹೂವಪ್ಪಗೌಡ, ಅಬಕಾರಿ ಉಪ ಆಯುಕ್ತರು, ಹಾಸನ ಇವರ ಬೀಳ್ಕೊಡುಗೆ ಸಮಾರಂಭಕ್ಕೆ ಹಾಜರಾಗಿದ್ದೆ ಎಂದು ತಿಳಿಸಿರುತ್ತಾರೆ. ಅದೇ ರೀತಿ ತಾನು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ ನಿ.ಪಿ.8 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ದಿವಾಕರ ಎನ್ ರವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿದಿರುತ್ತಾರೆ. ತನಿಖಾಧಿಕಾರಿಗಳಾದ ಶ್ರೀ. ಶಾಂತಿನಾಥ ವನ್ನೂರು ರವರನ್ನು ಪಿ.ಡಬ್ಲ್ಯೂ.3 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.9 ರಿಂದ ನಿ.ಪಿ.23 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ಪರವಾಗಿ ನಿ.ಡಿ.1 ರಿಂದ 19 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ಮಂಜುನಾಥ ರವರನ್ನು ಡಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಶ್ರೀ. ಮಂಜುನಾಥ ವೈ.ಎನ್ ರವರನ್ನು ಡಿ.ಡಬ್ಲ್ಯೂ.3 ಎಂದು ಸಾಕ್ಷ್ಯ ನುಡಿದಿರುತ್ತಾರೆ.

8. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

9. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

10. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

12. ಶ್ರೀ. ಹೆಚ್.ಎಂ ಗಿರೀಶ್ ಬಿನ್ ಮಸ್ತಿಗೌಡ, ಕದಂಬ ಗ್ರೂಪ್. ಚನ್ನರಾಯಪಟ್ಟಣ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಇವರು ತಮ್ಮ ದೂರಿನಲ್ಲಿ ಚನ್ನರಾಯಪಟ್ಟಣದಲ್ಲಿ ಎಲ್–9 ಸನ್ನದಿನ ಕದಂಬ ಬಾರ್ ಮಾಲಿಕತ್ವ ಹೊಂದಿದ್ದು, ದಿನಾಂಕ: 30/08/2014 ರಂದು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಅಬಕಾರಿ ನಿರೀಕ್ಷಕರಾದ ಶ್ರೀ. ಜ್ಞಾನಪ್ರಕಾಶ್ ಇವರು ಸಿಎಲ್–9ಗೆ ಭೇಟಿ ನೀಡಿದಾಗ 2 ಮಧ್ಯದ ಬಾಟಲಿಗಳ ಮುಚ್ಚಳಗಳನ್ನು ತಿರುಗಿಸಿ ಮುಚ್ಚಳವನ್ನು ಲೂಸ್ ಮಾಡಿ ಮುಚ್ಚಳವು ತಿರುಗುತ್ತಾವೆ ಈ ಬಗ್ಗೆ ಕೇಸ್ ದಾಖಲಿಸುವುದಾಗಿ ಹೇಳಿರುತ್ತಾರೆ. ಅಲ್ಲದೇ ಮಾಲುಗಳನ್ನು ಸಹ ಜಪ್ತಿ ಮಾಡುವುದಾಗಿ ಹೇಳಿರುತ್ತಾರೆ ಮತ್ತು ಅದೇ ದಿವಸ ಸಂಜೆ ಅವರ ಕಛೇರಿಗೆ ಬರಲು ಹೇಳಿದ್ದು ಆ ಪ್ರಕಾರ ದೂರುದಾರರು ಆ.ಸ.ನೌ ರವರ ಕಛೇರಿಗೆ ಬಂದಾಗ, ಆ.ಸ.ನೌ ರವರು ಕೇಸನ್ನು ದಾಖಲು ಮಾಡದಿರಲು ರೂ.10 ಲಕ್ಷ ನೀಡುವಂತೆ ತಿಳಿಸಿದ್ದು, ಮಾತುಕತೆಯ ನಂತರ ರೂ.2 ಲಕ್ಷ ಗಳನ್ನು ಪಡೆದುಕೊಳ್ಳಲು ಆ.ಸ.ನೌ ರವರು ಒಪ್ಪಿಕೊಂಡಿರುತ್ತಾರೆ ಅಂತಾ ಹೇಳಿರುತ್ತಾರೆ. ನಂತರ ದಿನಾಂಕ: 02/09/2014 ರಂದು ದೂರುದಾರರು ಆ.ಸ.ನೌ ರವರ ಸೂಚನೆ ಮೇರೆಗೆ ಅವರ ಕಛೇರಿಗೆ ಬಂದು ಭೇಟಿ ನೀಡಿದಾಗ ಹಣವನ್ನು ನೀಡುವಂತೆ ತಿಳಿಸಿರುತ್ತಾರೆ. ಲಂಚದ ಹಣಕ್ಕೆ ಬೇಡಿಕೆ ಸಲ್ಲಿಸಿದ್ದನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಮುದ್ರಿಸಿಕೊಂಡಿದ್ದು, ಅದನ್ನು ಸಿ.ಡಿ ಗೆ ವರ್ಗಾಯಿಸಿಕೊಂಡಿರುತ್ತಾರೆ. ಸದರಿ ಹಣವನ್ನು ನೀಡಲು ಇಚ್ಛಿಸದ ಕಾರಣ ದೂರುದಾರರು ದಿನಾಂಕ: 03/09/2014 ರಂದು

ಲೋಕಾಯುಕ್ತ ಪೋಲಿಸ್ ಠಾಣೆ ಹಾಸನ ಇವರಲ್ಲಿ ದೂರು ನೀಡಿದ್ದು, ತನಿಖಾಧಿಕಾರಿಗಳು ಅದನ್ನು ಪಡೆದುಕೊಂಡು ಹಾಸನ ಲೋಕಾಯುಕ್ತ ಠಾಣಾ ಮೊ.ನಂ.18/2014 ಕಲಂ 7 ಪಿ.ಸಿ ಕಾಯ್ದೆಯಲ್ಲಿ ದಾಖಲಿಸಿಕೊಂಡು ತನಿಖೆಯನ್ನು ಮಾಡಿ, ಆ.ಸ.ನೌ ರವರ ವಿರುದ್ಧ 7(13)(1)(ಡಿ) ರೆಡ್ ವಿತ್ 13(2) ಪಿ.ಸಿ. ಕಾಯ್ದೆ 1988 ರೀತ್ಯಾ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

13. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ನಿ.ಪಿ.1 ರಿಂದ 3 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಳ್ಳಲಾಯಿತು. ಪಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಚನ್ನರಾಯಪಟ್ಟಣದಲ್ಲಿ ಕದಂಬ ಬಾರ್ & ರೆಸ್ಟೋರೆಂಟ್ ನಡೆಸುತ್ತಿದ್ದು, ದಿನಾಂಕ: 30/08/2014 ರಂದು ಸಂಜೆ 5 ಗಂಟೆಗೆ ಆ.ಸ.ನೌ ರವರು ಇವರ ಅಂಗಡಿಗೆ ಬಂದಾಗ 2 ಬಾಟಲ್ Royal Stag Whisky ತೆಗೆದುಕೊಂಡು ಅದರ ಮುಚ್ಚಳವನ್ನು ಜೋರಾಗಿ ತಿರುಗಿಸಿದ್ದು, ಸದರಿ ಬಾಟಳುಗಳು ನಕಲಿ ಮಧ್ಯದ ಬಾಟಳುಗಳ ರೀತಿ ಕಾಣುತ್ತದೆ ಎಂದು ಮರುದಿನ ಕಛೇರಿಗೆ ಬರಲು ಹೇಳಿದ್ದರು ಅಂತಾ ನುಡಿದಿರುತ್ತಾರೆ. ಮುಂದುವರೆದು, ದಿನಾಂಕ: 02/09/2014 ರಂದು ಸಂಜೆ 4 ಗಂಟೆ ವೇಳೆಗೆ ಆ.ಸ.ನೌ ರವರ ಕಛೇರಿಗೆ ಹೋದಾಗ, ಆ.ಸ.ನೌ ರವರು ಬಾರ್ & ರೆಸ್ಟೋರೆಂಟ್‌ನಲ್ಲಿ ನಕಲಿ ಮಧ್ಯವನ್ನು ಮಾರಾಟ ಮಾಡುತ್ತಿರುವುದಾಗಿ ರೂ.20 ಲಕ್ಷ ಲಂಚದ ಹಣ ಕೇಳಿದ್ದು, ಹಣ ಕೊಡದೇ ಇದ್ದರೇ ಅಂಗಡಿಯಲ್ಲಿದ್ದ ಮಾಲುಗಳನ್ನು ಅಮಾನತ್ತುಪಡಿಸುವುದಾಗಿ ಹೇಳಿರುತ್ತಾರೆ ಅಂತಾ ನುಡಿದಿರುತ್ತಾರೆ. ಅಂತಿಮವಾಗಿ ರೂ.2 ಲಕ್ಷಗಳನ್ನು ಕೊಡುವಂತೆ ಒತ್ತಾಯಿಸಿದ್ದು, ಇದನ್ನು ತಮ್ಮ ಮೊಬೈಲ್‌ನಲ್ಲಿ ದಾಖಲು ಮಾಡಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ದಿನಾಂಕ: 03/09/2014 ರಂದು ಹಾಸನ ಲೋಕಾಯುಕ್ತ ಪೋಲಿಸ್ ಠಾಣೆಗೆ ಹೋಗಿ ನಿ.ಪಿ.1 ರಂತೆ ದೂರನ್ನು ಸಲ್ಲಿಸಿದ್ದು, ಅಲ್ಲಿ ಮೊಬೈಲ್ ಮತ್ತು ಸಿ.ಡಿಯನ್ನು ಹಾಜರುಪಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳ ಪಂಚರನ್ನು ಕರೆಸಿ, ದೂರುದಾರರನ್ನು ಪರಿಚಯಿಸಿ, ದೂರಿನ ಅಂಶಗಳನ್ನು ತಿಳಿಸಿ ಮರುದಿನ ದಿನಾಂಕ: 04/09/2014 ರಂದು ಬೆಳಗ್ಗೆ 6.45ಕ್ಕೆ ಬರಲು ಹೇಳಿ, ರೂ.2 ಲಕ್ಷಗಳನ್ನು ತೆಗೆದುಕೊಂಡು ಬರಲು ಹೇಳಿರುತ್ತಾರೆ.

14. ದಿನಾಂಕ: 04/09/2014 ರಂದು ಬೆಳಗ್ಗೆ ಠಾಣೆಗೆ ಹೋದಾಗ ಅಲ್ಲಿ ಪಂಚರು ಸಹ ಬಂದಿದ್ದು, ಅವರ ಸಮಕ್ಷಮ ರೂ.1000 ಮುಖಬೆಲೆಯ 200 ನೋಟುಗಳನ್ನು ಹಾಜರುಪಡಿಸಿದ್ದು, ಪೋಲಿಸ್ ಸಿಬ್ಬಂದಿಯವರು ಸದರಿ ನೋಟುಗಳಿಗೆ ಫಿನಾಫ್ತಲಿನ್ ಪೌಡರನ್ನು ಲೇಪನ ಮಾಡಿರುತ್ತಾರೆ. ನೋಟುಗಳ ನಂಬರ್ ಮತ್ತು ಮೌಲ್ಯವನ್ನು ನಿ.ಪಿ.2 ರಂತೆ ಬಿಳಿ ಹಾಳೆಯಲ್ಲಿ ಬರೆದುಕೊಂಡು ಮಹಜರ್‌ನಲ್ಲಿ ಬರೆದುಕೊಂಡಿರುತ್ತಾರೆ. ಪೌಡರ್ ಲೇಪಿಸಿದ ನೋಟುಗಳನ್ನು ಸಾಕ್ಷಿ ವೆಂಕಟೇಶ್ ಇವರ ಮೂಲಕ ಇವರ ಪ್ಯಾಂಟಿನ ಬಲಜೇಬಿನಲ್ಲಿ ಇಟ್ಟಿದ್ದು, ವೆಂಕಟೇಶ್ ಇವರ ಕೈಗಳನ್ನು ದ್ರಾವಣದಲ್ಲಿ ತೊಳೆಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ಮುಂದುವರೆದು, ತನಿಖಾಧಿಕಾರಿಗಳು ಆ.ಸ.ನೌ ರವರು ಹಣ ಕೇಳಿದರೆ ತಲೆ ಸವರಿಕೊಂಡು ಸೂಚನೆ ನೀಡುವಂತೆ ಹೇಳಿದ್ದು, ಸಾಕ್ಷಿ ದಿವಾಕರ್ ಇವರನ್ನು ಇವರ ಜೊತೆಗೆ ಕಳುಹಿಸಿಕೊಡಲು ಹೇಳಿದ್ದು ನಿ.ಪಿ.3 ರಂತೆ ಪ್ರಾಯೋಗಿಕ ಪಂಚನಾಮೆಯನ್ನು ಮಾಡಿರುತ್ತಾರೆ. ನಂತರ ಇವರು ಬೆಳಗ್ಗೆ 9.30ಕ್ಕೆ ಠಾಣೆಯನ್ನು ಬಿಟ್ಟು ತಾನು ಮತ್ತು ಸಾಕ್ಷಿ ದಿವಾಕರ ಇವರಿಗೆ ಸೇರಿದ ಇನ್ನೋವಾ ಕಾರಿನಲ್ಲಿ ತನಿಖಾಧಿಕಾರಿಗಳು ಮತ್ತು ಅವರ ಉಳಿದ ಸಿಬ್ಬಂದಿ ಹಾಗೂ ಇನ್ನೊಬ್ಬ ಪಂಚಸಾಕ್ಷಿ ಇಲಾಖಾ ಜೀಪಿನಲ್ಲಿ ಹೊರಟು ಆ.ಸ.ನೌ ರವರ ಕಛೇರಿಗೆ ಬಂದಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ತಾನು ಹಾಗೂ ಸಾಕ್ಷಿ ದಿವಾಕರ ಇವರು ಆ.ಸ.ನೌ ರವರ ಕಛೇರಿಗೆ ಬಂದಿದ್ದು, ಆ.ಸ.ನೌ ರವರನ್ನು ಭೇಟಿ ಆದಾಗ ರೂ.2 ಲಕ್ಷ ಹಣ ತಂದ ಬಗ್ಗೆ ರೂ.50,000/– ಕಡಿಮೆ ಮಾಡಿಕೊಳ್ಳುವಂತೆ ಕೇಳಿದಾಗ ಆ.ಸ.ನೌ ರವರು ಅದಕ್ಕೆ ಒಪ್ಪಿಕೊಂಡಿರುವುದಿಲ್ಲ ಅಂತಾ ನುಡಿದಿರುತ್ತಾರೆ.

15. ಆ.ಸ.ನೌ ರವರು ತಮ್ಮ ಕಛೇರಿಯಲ್ಲಿ ಹಣ ಕೊಡುವುದು ಬೇಡ ಎಂದು ಹೇಳಿ ಆ.ಸ.ನೌ ರವರ ಸಿಬ್ಬಂದಿಯಾದ ಹರೀಶ್ ರವರನ್ನು ದೂರುದಾರರ ಇನ್ನೋವಾ ಕಾರಿನಲ್ಲಿ ಕಳುಹಿಸಿ ತಾನು ಸರ್ಕಾರಿ ಜೀಪಿನಲ್ಲಿ ಹೋಟೆಲ್ ಕಡೆಗೆ ಹೋಗುವುದಾಗಿ ಮತ್ತು ತನ್ನನ್ನು ಹಿಂಬಾಲಿಸಿಕೊಂಡು ಬರುವಂತೆ ಹೇಳಿದ್ದರು ಅಂತಾ ನುಡಿದಿರುತ್ತಾರೆ. ಸದರಿ ವಿಷಯದ ಬಗ್ಗೆ ಫೋನ್ ಮೂಲಕ ತನಿಖಾಧಿಕಾರಿಗಳಿಗೆ ತಿಳಿಸಿ, ತಾನು ಸಾಕ್ಷಿ ದಿವಾಕರ ಮತ್ತು ಹರೀಶ್ ಇವರು ಇನ್ನೋವಾ

B

ಕಾರಿನಲ್ಲಿ, ಆ.ಸ.ನೌ ರವರು ಹೋಗುತ್ತಿದ್ದ ವಾಹನವನ್ನು ಹಿಂಬಾಲಿಸಿಕೊಂಡು ಹೋದಾಗ ಆ.ಸ.ನೌ ರವರು ಚನ್ನರಾಯಪಟ್ಟಣದ ಹಳೇ ಬಸ್ ನಿಲ್ದಾಣದ ಹತ್ತಿರ ವಾಹನವನ್ನು ನಿಲ್ಲಿಸಿದ್ದು, ದೂರುದಾರರು ತನ್ನ ವಾಹನವನ್ನು ಆ.ಸ.ನೌ ರವರ ವಾಹನದ ಪಕ್ಕದಲ್ಲಿ ನಿಲ್ಲಿಸಿದಾಗ ಆ.ಸ.ನೌ ರವರು ರೂ.2 ಲಕ್ಷಗಳ ಲಂಚದ ಹಣವನ್ನು ಆ.ಸ.ನೌ ರವರ ಜೀಪಿನಲ್ಲಿದ್ದ ಚಾಲಕ ಮಂಜುನಾಥ ಅವರ ಬಳಿ ಕೊಡುವಂತೆ ಹೇಳಿದ ಕಾರಣ ತಾನು ಸದರಿ ರೂ.2 ಲಕ್ಷ ಇದ್ದ ಕವರ್‌ನ್ನು ಮಂಜುನಾಥ ರವರ ಕೈಯಲ್ಲಿ ಕೊಟ್ಟಿರುತ್ತೇನೆ ಅಂತಾ ನುಡಿದಿರುತ್ತಾರೆ. ಆಗ ಮಂಜುನಾಥ ರವರು ಹಣವನ್ನು ಪಡೆದ ನಂತರ ಅಧಿಕಾರಿಗಳು ಹಿಂಬಾಲಿಸಿಕೊಂಡು ಬಂದಿದ್ದನ್ನು ಗಮನಿಸಿ ಅನುಮಾನ ಬಂದು ಜೀಪಿನಿಂದ ಇಳಿದು ಓಡಿಹೋದನು ಅಂತಾ ನುಡಿದಿರುತ್ತಾರೆ. ಮುಂದುವರೆದು, ಆ.ಸ.ನೌ ರವರು ಜೀಪನ್ನು ಚಾಲನೆ ಮಾಡಲು ಪ್ರಯತ್ನಿಸಿದಾಗ ಪೋಲಿಸ್ ಅಧಿಕಾರಿಗಳು ಜೀಪನ್ನು ತಡೆದು ಆ.ಸ.ನೌ ರವರನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ತಾನು ತನಿಖಾಧಿಕಾರಿಗಳಿಗೆ ಲಂಚದ ಹಣವನ್ನು ಮಂಜುನಾಥ ಜೀಪ್ ಚಾಲಕರ ಬಳಿ ಕೊಟ್ಟಿದ್ದು ಅಂತಾ ಹೇಳಿದ್ದು, ನಂತರ ತನಿಖಧಿಕಾರಿಗಳು ಆ.ಸ.ನೌ ರವರ ಸಮೇತ ಆ.ಸ.ನೌ ರವರ ಕಛೇರಿಗೆ ಬಂದಿರುತ್ತಾರೆ ಅಂತಾ ನುಡಿದಿರುತ್ತಾರೆ.

16. ತನಿಖಾಧಿಕಾರಿಗಳು ಆ.ಸ.ನೌ ರವರಿಗೆ ಲಂಚದ ಹಣದ ಬಗ್ಗೆ ವಿಚಾರಿಸಿದಾಗ ಜೀಪ್ ಚಾಲಕ ಮಂಜುನಾಥ ರವರು ಹಣ ತೆಗೆದುಕೊಂಡು ಹೋದ ಬಗ್ಗೆ ತಿಳಿಸಿರುತ್ತಾರೆ. ಜೀಪ್ ಚಾಲಕನನ್ನು ಕರೆಸುವ ಪ್ರಯತ್ನ ಮಾಡಿದಾಗ ಸದರಿ ಮಂಜುನಾಥನೇ ಆ.ಸ.ನೌ ರವರ ಕಛೇರಿಗೆ ಮರಳಿ ಬಂದಿದ್ದು, ತನಿಖಾಧಿಕಾರಿಗಳು ಮಂಜುನಾಥ ಇವರಿಗೆ ಹಣದ ಬಗ್ಗೆ ವಿಚಾರಿಸಿದಾಗ ಅವರು ಆ.ಸ.ನೌ ರವರ ಹೇಳಿಕೆಯ ಮೇರೆಗೆ ತಾನು ಪಡೆದಿದ್ದು, ಅದನ್ನು ಅನುಪಮ ವೈನ್ಸ್ ಶಾಪ್‌ನ ಕ್ಯಾಷಿಯರ್‌ಗೆ ಕೊಟ್ಟ ಬಗ್ಗೆ ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಮುಂದುವರೆದು, ತನಿಖಾಧಿಕಾರಿಗಳು ಮಂಜುನಾಥ ರವರನ್ನು ಅನುಮಪ ವೈನ್ಸ್ ಶಾಪ್‌ಗೆ ಕರೆದುಕೊಂಡು ಹೋಗಿ ರೂ.2 ಲಕ್ಷವನ್ನು ಮರಳಿ ತೆಗೆದುಕೊಂಡು ಬಂದಿರುತ್ತಾರೆ. ಮಂಜುನಾಥ ಈತನು ತನಗೆ ಲಂಚದ ಹಣದ ಬಗ್ಗೆ ತನಗೆ ಗೊತ್ತಿರುವುದಿಲ್ಲ. ಆ.ಸ.ನೌ ರವರ ಹೇಳಿಕೆಯ ಮೇರೆಗೆ ತಾನು

ಹಿ

ಪಡೆದ ಬಗ್ಗೆ ನಿ.ಪಿ.4 ರಂತೆ ಹೇಳಿಕೆ ಕೊಟ್ಟಿದ್ದು ಅಲ್ಲದೇ ಆ.ಸ.ನೌ ರವರು ಸಹ ನಿ.ಪಿ.5 ರಂತೆ ಹೇಳಿಕೆಯನ್ನು ಕೊಟ್ಟರುತ್ತಾರ ಅಂತಾ ನುಡಿದಿರುತ್ತಾರೆ.

17. ಮುಂದುವರೆದು ಮಂಜುನಾಥ ರವರ ಪ್ಯಾಂಟಿನ ಬಲಜೇಬಿನಲ್ಲಿದ್ದ ಹಣವನ್ನು ಸಾಕ್ಷಿದಾರ ದಿವಾಕರ ಇವರಿಂದ ತೆಗೆಯಿಸಿ ನೋಟುಗಳನ್ನು ತಾಳೆ ಮಾಡಿರುತ್ತಾರೆ. ಮಂಜುನಾಥ ಇವರ ಕೈಗಳನ್ನು ದ್ರಾವಣದಲ್ಲಿ ತೆಗೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಮಂಜುನಾಥ ಇವರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ ಪ್ಯಾಂಟನ್ನು ವಶಕ್ಕೆ ಪಡೆದು ಬಲಜೇಬಿನ ಭಾಗವನ್ನು ದ್ರಾವಣದಲ್ಲಿ ತೊಳೆಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತ ನುಡಿದಿರುತ್ತಾರೆ. ಮುಂದುವರೆದು ತಾನು ದೂರು ನೀಡುವ ವೇಳೆಯಲ್ಲಿ ಹಾಜರುಪಡಿಸಿದ್ದ ಸಿ.ಡಿ.ಯನ್ನು ತನಿಖಾಧಿಕಾರಿಗಳು ಆ.ಸ.ನೌ ರವರ ಕಛೇರಿಯಲ್ಲಿ ಲಾಪ್‌ಟಾಪ್‌ನಲ್ಲಿ ಅಬಕಾರಿ ಉಪ ನಿರೀಕ್ಷಕರು ಮತ್ತು ಸಿಬ್ಬಂದಿ ಶ್ರೀಮತಿ. ರಾಜೇಶ್ವರಿ ರವರಿಗೆ ಕೇಳಿಸಿದಾಗ ತನ್ನ ಹಾಗೂ ಆ.ಸ.ನೌ ರವರ ಧ್ವನಿಯನ್ನು ಗುರುತಿಸಿರುತ್ತಾರೆ ಅಂತಾ ನುಡಿದಿದ್ದು, ನಿ.ಪಿ.6 ರಂತೆ ಟ್ರಾಪ್ ಪಂಚನಾಮೆಯನ್ನು ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಆ ವೇಳೆಯಲ್ಲಿ ನಿ.ಪಿ.7 ಮತ್ತು 8 ರಂತೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಅಂತಾ ನುಡಿದಿರುತ್ತಾರೆ.

18. ಶಿಸ್ತು ಪ್ರಾಧಿಕಾರವು ಶ್ರೀ. ದಿವಾಕರ ಎನ್ ಇವರನ್ನು ಪಿ.ಡಬ್ಲ್ಯೂ.2 ಎಂದು ನೆರಳು ಸಾಕ್ಷಿದಾರರೆಂದು ಸಾಕ್ಷ್ಯವನ್ನು ಮಾಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 03/09/2014 ರಂದು ತಮ್ಮ ಮೇಲಾಧಿಕಾರಿಗಳ ಆದೇಶದ ಮೇರೆಗೆ ಹಾಸನ ಲೋಕಾಯುಕ್ತ ಕಛೇರಿಗೆ ಹೋಗಿದ್ದು, ಕಛೇರಿಗೆ ಹೋದಾಗ ಸಂಜೆ 5.30 ಗಂಟೆ ಆಗಿದ್ದು, ತನಿಖಾಧಿಕಾರಿಗಳು ಮರುದಿನ ಚನ್ನರಾಯಪಟ್ಟಣದಲ್ಲಿ ಟ್ರಾಪ್ ಮಾಡಲು ಇರುತ್ತದೆ ಮತ್ತು ಬೆಳಗ್ಗೆ ಬರಲು ಹೇಳಿರುತ್ತಾರೆ ಅಂತಾ ನುಡಿದಿರುತ್ತಾರೆ. ಮರುದಿನ ಬೆಳಗ್ಗೆ 6.45ಕ್ಕೆ ತಾನು ಮತ್ತು ವೆಂಕಟೇಶ್ ಲೋಕಾಯುಕ್ತ ಕಛೇರಿಗೆ ಹೋಗಿದ್ದು, ಅಲ್ಲಿ ದೂರುದಾರರು ಹಾಜರಿದ್ದು, ದೂರಿನ ಬಗ್ಗೆ ಮಾಹಿತಿ ನೀಡಿದ್ದು, ದೂರುದಾರರು ದಾಖಲಿಸಿಕೊಂಡಿದ್ದ ಸಂಭಾಷಣೆಯನ್ನು ತನಗೆ

B

ಕೇಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ದೂರುದಾರರು ರೂ.1000/- ಗಳ 200 ನೋಟುಗಳನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಅವುಗಳ ಸಂಖ್ಯೆಗಳನ್ನು ವೆಂಕಟೇಶ್ ಇವರು ತಾನು ಹೇಳಿದಂತೆ ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ಸದರಿ ನೋಟುಗಳಿಗೆ ಪೌಡರ್‌ನ್ನು ಹಚ್ಚಿ ಒಂದು ಕವರ್‌ನಲ್ಲಿ ಹಾಕಿ ದೂರುದಾರರ ಪ್ಯಾಂಟಿನ ಬಲಹಿಂಭಾಗದ ಜೇಬಿನಲ್ಲಿ ಇರಿಸಿದ್ದು, ನಂತರ ವೆಂಕಟೇಶ್ ಇವರ ಕೈಗಳನ್ನು ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ನಂತರ ಪ್ರಾಯೋಗಿಕ ಪಂಚನಾಮೆಯನ್ನು ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ.

19. ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರ ಕಛೇರಿಗೆ ಬಂದಾಗ ಬೆಳಗ್ಗೆ 10.30 ಗಂಟೆ ಆಗಿದ್ದು, ಕಛೇರಿಯಲ್ಲಿ ಆ.ಸ.ನೌ ರವರು ಹಣವನ್ನು ಪಡೆದಿರುವುದಿಲ್ಲ, ಬೇರೊಂದು ಸ್ಥಳಕ್ಕೆ ಬರಲು ಹೇಳಿದ್ದರು. ಆ.ಸ.ನೌ ರವರು ಹೋಗುತ್ತಿದ್ದ ವಾಹನದ ಹಿಂಬದಿಯಲ್ಲಿ ಇವರ ವಾಹನಗಳಲ್ಲಿ ಹೋದಾಗ ಆ.ಸ.ನೌ ರವರು ತಮ್ಮ ಜೀಪನ್ನು ಚನ್ನರಾಯಪಟ್ಟಣದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ್ದು, ಅವರ ಚಾಲಕ ಮಂಜುನಾಥನನ್ನು ಇವರ ವಾಹನದ ಬಳಿಗೆ ಕಳುಹಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಮಂಜುನಾಥ ಇವರು ದೂರುದಾರರಿಂದ ಹಣ ಪಡೆದು ಜನರ ಮಧ್ಯದಲ್ಲಿ ಹೋಗಿಬಿಟ್ಟ ಅಂತಾ ನುಡಿದಿರುತ್ತಾರೆ. ಅಲ್ಲಿ ಜನಸಂದಣಿ ಹೆಚ್ಚಾಗಿದ್ದರಿಂದ ಆ.ಸ.ನೌ ರವರ ಕಛೇರಿಗೆ ಬಂದೆವು ಅಂತಾ ನುಡಿದಿರುತ್ತಾರೆ. ಆ.ಸ.ನೌ ರವರ ಕಛೇರಿಯಲ್ಲಿ ತನಿಖಾಧಿಕಾರಿಗಳು ವಿಚಾರಣೆ ಮಾಡಿದಾಗ, ಆ.ಸ.ನೌ ರವರು ಫೋನ್ ಮಾಡಿ ಚಾಲಕನನ್ನು ಕಛೇರಿಗೆ ಕರೆಸಿಕೊಂಡಿದ್ದು, ಆತನ ಬಳಿಯಲ್ಲಿ ಹಣ ಇರಲಿಲ್ಲ ಅಂತಾ ನುಡಿದಿರುತ್ತಾರೆ. ಮತ್ತೆ ಪುನಃ ಫೋನ್ ಮಾಡಿ ಹಣ ಇದ್ದಂತಹ ಕವರ್‌ನ್ನು ತರಿಸಿರುತ್ತಾರೆ. ಮಂಜುನಾಥನು ಹಣವನ್ನು ಎಲ್ಲಿ ಮತ್ತು ಯಾರಿಗೆ ಕೊಟ್ಟಿದ್ದ ಎನ್ನುವುದು ತನಗೆ ತಿಳಿದುಬಂದಿಲ್ಲ ಅಂತಾ ನುಡಿದಿರುತ್ತಾರೆ. ಚಾಲಕ ಮಂಜುನಾಥ ರವರ ಕೈಗಳನ್ನು ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ಆತ ಹಣ ಇದ್ದಂತಹ ಕವರ್‌ನ್ನು ತನ್ನ ಪ್ಯಾಂಟಿನ ಮುಂಭಾಗದ ಬಲಜೇಬಿನಲ್ಲಿ ಇರಿಸಿಕೊಂಡಿದ್ದ ಆ

B.

ಜೇಬಿನಿಂದ ಲೋಕಾಯುಕ್ತ ಸಿಬ್ಬಂದಿ ಹಣ ಇದ್ದಂತಹ ಕವರ್‌ನ್ನು ಹೊರಕ್ಕೆ ತೆಗೆದುಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಆ.ಸ.ನೌ ರವರು ಮತ್ತು ಸದರಿ ಮಂಜುನಾಥ ರವರು ತಮ್ಮ ಸಮಜಾಯಿಷಿಯನ್ನು ಕೊಟ್ಟರೋ ಇಲ್ಲವೋ ಎನ್ನುವುದು ತನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದ್ದ ದಾಖಲಾತಿಯನ್ನು ನೋಡಿದ್ದು, ನಿ.ಪಿ.4 ರಿಂದ 6 ಮೇಲೆ ತನ್ನ ಸಹಿ ಇದಿದ್ದನ್ನು ಗುರುತಿಸಿಕೊಂಡಿರುತ್ತಾರೆ.

20.ಶಿಸ್ತು ಪ್ರಾಧಿಕಾರವು ತನಿಖಾಧಿಕಾರಿಗಳಾದ ಶ್ರೀ. ಶಾಂತಿನಾಥ ವನ್ನೂರು ರವರನ್ನು ಪಿ.ಡಬ್ಲ್ಯೂ.4 ಎಂದು ಸಾಕ್ಷಿ ಮಾಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 03/09/2014 ರಂದು ದೂರುದಾರರು ಠಾಣೆಗೆ ಹಾಜರಾಗಿ ದೂರನ್ನು ಸಲ್ಲಿಸಿದ್ದು, ಅದನ್ನು ದಾಖಲಿಸಿಕೊಂಡು ನಿ.ಪಿ.9 ರಂತೆ ಪ್ರಥಮ ವರ್ತಮಾನ ವರದಿಯನ್ನು ಸಂಬಂಧಪಟ್ಟ ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತೇನೆ ಅಂತಾ ನುಡಿದಿರುತ್ತಾರೆ. ನಂತರ ಇವರು ಜಿಲ್ಲಾ ಆಸ್ಪತ್ರೆ ಹಾಸನ ಇವರಿಗೆ ಇಬ್ಬರು ಪಂಚರನ್ನು ಕಳುಹಿಸಿಕೊಡಬೇಕೆಂದು ನಿ.ಪಿ.10 ರಂತೆ ಪತ್ರವನ್ನು ಬರೆದುಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಜಿಲ್ಲಾ ಆಸ್ಪತ್ರೆಯವರು ಇಬ್ಬರು ಪಂಚರನ್ನು ಕಳುಹಿಸಿದ್ದು ಅಲ್ಲದೇ ಪತ್ರವನ್ನು ಕಳುಹಿಸಿದ್ದು, ಅದನ್ನು ನಿ.ಪಿ.11 ಅಂತಾ ಗುರುತಿಸಲಾಗಿರುತ್ತದೆ. ದಿನಾಂಕ: 04/09/2014 ರಂದು ಬೆಳಗ್ಗೆ 6.45ಕ್ಕೆ ಪಂಚರು ಠಾಣೆಗೆ ಬಂದಿದ್ದು, ದೂರುದಾರರು ಸಹ ಬಂದಿದ್ದು, ಪಂಚರಿಗೆ ದೂರಿನಲ್ಲಿರುವ ವಿಷಯವನ್ನು ಹೇಳಿ ದೂರುದಾರರು ಹಾಜರುಪಡಿಸಿದ ಸಿ.ಡಿ.ಯನ್ನು ಗಣಕಯಂತ್ರದಲ್ಲಿ ಅಳವಡಿಸಿ ಪಂಚರಿಗೆ ಸಂಭಾಷಣೆಯನ್ನು ಕೇಳಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ದೂರುದಾರರು ಆ.ಸ.ನೌ ರವರಿಗೆ ಲಂಚದ ಹಣವಾಗಿ ಕೊಡಲು ತಂದಿದ್ದ ರೂ.1000/- ಮುಖಬೆಲೆಯ 200 ನೋಟುಗಳನ್ನು ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರ್ ಮತ್ತು ಮೌಲ್ಯವನ್ನು ಪಂಚರು ಒಂದು ಬಿಳಿ ಹಾಳೆಯ ಮೇಲೆ ದಾಖಲಿಸಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ಸದರಿ ನೋಟುಗಳಿಗೆ ಇವರ ಸಿಬ್ಬಂದಿಯವರಿಂದ ಫಿನಾಫ್ತಲಿನ್ ಪೌಡರನ್ನು ಲೇಪಿಸಿ, ದೂರುದಾರರು ಹಣದ ಜೊತೆಯಲ್ಲಿ ತಂದಿದ್ದ ಖಾಕಿ ಕವರ್‌ಗೂ ಸಹ ಫಿನಾಫ್ತಲಿನ್ ಪೌಡರನ್ನು ಲೇಪಿಸಿ, ಪಂಚರಾದ ವೆಂಕಟೇಶ್

B

ರವರಿಗೆ ಆ ಹಣವನ್ನು ಖಾಕಿ ಕವರ್‌ನ ಒಳಗೆ ಹಾಕಿ ದೂರುದಾರರ ಪ್ಯಾಂಟಿನ ಮುಂಭಾಗದ ಬಲಜೇಬಿನಲ್ಲಿ ಇರಿಸಿರುತ್ತಾರೆ ಮತ್ತು ವೆಂಕಟೇಶ್ ರವರ ಕೈಗಳನ್ನು ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ.

21. ದೂರುದಾರರಿಗೆ ಆ.ಸ.ನೌ ರವರು ಲಂಚದ ಹಣ ಬೇಡಿಕೆ ಇಟ್ಟಾಗ ಕೊಡಬೇಕು ಮತ್ತು ಹಣ ಪಡೆದ ನಂತರ ತನ್ನ ಬಲಗೈನಿಂದ ತಲೆ ಒರೆಸಿಕೊಳ್ಳುವ ಮೂಲಕ ಮತ್ತು ಮೊಬೈಲ್‌ನಿಂದ ಫೋನ್ ಮಾಡುವ ಮೂಲಕ ಸನ್ನೆಯನ್ನು ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಪಂಚರಾದ ದಿವಾಕರ ಇವರಿಗೆ ದೂರುದಾರರೊಂದಿಗೆ ಇದ್ದು ನಡೆಯುವ ಎಲ್ಲಾ ವಿದ್ಯಾಮಾನಗಳನ್ನು ಗಮನಿಸಿ ತಿಳಿಸಬೇಕೆಂದು ಹೇಳಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ನಿ.ಪಿ.3 ರಂತೆ ಪಂಚನಾಮೆಯನ್ನು ಮಾಡಿದ್ದು, ನಿ.ಪಿ.7 ರಂತೆ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ.

22. ಮುಂದುವರೆದು, ಅದೇ ದಿವಸ ಬೆಳಗ್ಗೆ 9.35ಕ್ಕೆ ಇವರೆಲ್ಲರೂ ತಮ್ಮ ಇಲಾಖಾ ವಾಹನದಲ್ಲಿ ಮತ್ತು ದೂರುದಾರರಿಗೆ ಸೇರಿದ ಇನ್ನೋವಾ ವಾಹನದಲ್ಲಿ ಚನ್ನರಾಯಪಟ್ಟಣದ ಅಬಕಾರಿ ಕಛೇರಿಗೆ ಬಂದಾಗ ಸಮಯ 10.25 ಗಂಟೆ ಆಗಿದ್ದು, ಇವರೆಲ್ಲರೂ ಕಛೇರಿಯಿಂದ ಸ್ವಲ್ಪ ದೂರ ನಿಂತಿದ್ದು, ದೂರುದಾರರಿಗೆ ಮತ್ತು ದಿವಾಕರ ಇವರಿಗೆ ಆ.ಸ.ನೌ ರವರ ಕಛೇರಿಗೆ ಕಳುಹಿಸಿಕೊಟ್ಟಿರುತ್ತೇನೆ ಅಂತಾ ನುಡಿದಿರುತ್ತಾರೆ. ನಂತರ 10.45ರ ಸಮಯಕ್ಕೆ ದೂರುದಾರರು ಆ.ಸ.ನೌ ರವರ ಕಛೇರಿಯಿಂದ ಹೊರಬಂದು ಇವರಿಗೆ ಫೋನು ಮಾಡಿ ಆ.ಸ.ನೌ ರವರು ಕಛೇರಿಯಲ್ಲಿ ಹಣ ಕೊಡುವುದು ಬೇಡ, ಹೋಟಲ್ ಆದಸ್ಯ ಕಡೆಗೆ ಹೋಗೋಣ ಅಂತಾ ತಿಳಿಸಿದ್ದು, ಆ.ಸ.ನೌ ರವರು ತಮ್ಮ ಇಲಾಖಾ ವಾಹನದಲ್ಲಿ ಮುಂದೆ ಹೋಗುತ್ತಿದ್ದು, ಆ ವಾಹನವನ್ನು ದೂರುದಾರರು ಹಿಂಭಾಲಿಸಿತ್ತಿದ್ದು ಮತ್ತು ಆ.ಸ.ನೌ ರವರು ತಮ್ಮ ಕಛೇರಿಯ ಹರೀಶ್ ಎಂಬ ಸಿಬ್ಬಂದಿಯನ್ನು ದೂರುದಾರರ ವಾಹನದಲ್ಲಿ ಕಳುಹಿಸಿದ್ದಾರೆ, ನೀವು ವಾಹನವನ್ನು ಹಿಂಭಾಲಿಸಿ ಅಂತಾ ದೂರುದಾರರು ತನಿಖಾಧಿಕಾರಿಗಳಿಗೆ ಫೋನ್ ಮೂಲಕ ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ.

23.ನಂತರ ಆ.ಸ.ನೌ ರವರು ಚನ್ನರಾಯಪಟ್ಟಣದ ಬಸ್ ನಿಲ್ದಾಣದ ಹತ್ತಿರ ತಮ್ಮ ವಾಹನವನ್ನು ನಿಲ್ಲಿಸಿದ್ದು, ದೂರುದಾರರು ಅವರ ಹಿಂಬದಿಯಲ್ಲಿ ಸ್ವಲ್ಪ ದೂರದಲ್ಲಿ ತಮ್ಮ ವಾಹನವನ್ನು ನಿಲ್ಲಿಸಿದ್ದು, ತನಿಖಾಧಿಕಾರಿಗಳು ಇವರ ಇಲಾಖಾ ವಾಹನದಲ್ಲಿದ್ದು ಗಮನಿಸುತ್ತಿದ್ದಾಗ ಆ.ಸ.ನೌ ರವರ ವಾಹನದ ಚಾಲಕ ದೂರುದಾರರ ವಾಹನದ ಬಳಿಗೆ ಬಂದು ದೂರುದಾರರಿಂದ ಆ ಖಾಕಿ ಲಕೋಟೆಯನ್ನು ಪಡೆದು ಜನಸಂದಣಿಯಲ್ಲಿ ಮರೆಯಾಗಿರುತ್ತಾರೆ ಅಂತಾ ನುಡಿದಿರುತ್ತಾರೆ. ಈ ವಿಷಯವನ್ನು ದೂರುದಾರರು ತನ್ನ ಮೊಬೈಲ್ ಫೋನ್‌ನಿಂದ ಇವರಿಗೆ ತಿಳಿಸುತ್ತಲೇ ಇದ್ದರು, ನಂತರ ಆ.ಸ.ನೌ ರವರು ಖುದ್ದು ತಮ್ಮ ಇಲಾಖಾ ವಾಹನವನ್ನು ಚಲಾಯಿಸಿಕೊಂಡು ಮುಂದೆ ಹೋದಾಗ ತನಿಖಾಧಿಕಾರಿಗಳು ವಾಹನವನ್ನು ಸುತ್ತುವರೆದು, ಅವರಿಗೆ ತಮ್ಮ ಪರಿಚಯ ಮಾಡಿಕೊಂಡು ಪ್ರಕರಣದ ಬಗ್ಗೆ ತಿಳಿಸಿದ್ದು, ಆ ಸ್ಥಳದಲ್ಲಿ ನಿ.ಪಿ.12 ರಂತೆ ನಕ್ಷೆಯನ್ನು ತೆಗೆದಿರುತ್ತಾರೆ ಅಂತಾ ನುಡಿದಿರುತ್ತಾರೆ. ಅಲ್ಲಿ ಜನಸಂದಣಿ ಪ್ರದೇಶವಾಗಿದ್ದರಿಂದ ಆ.ಸ.ನೌ ಮತ್ತು ಉಳಿದವರನ್ನು ಕರೆದುಕೊಂಡು ಆ.ಸ.ನೌ ರವರ ಕಛೇರಿಗೆ ಬಂದಿರುತ್ತಾರೆ.

24.ತನಿಖಾಧಿಕಾರಿಗಳು ಅಲ್ಲಿ ಹಣದ ಬಗ್ಗೆ ಆ.ಸ.ನೌ ರವರನ್ನು ವಿಚಾರಿಸಿದಾಗ ಅವರು ಆ ಹಣವನ್ನು ತಮ್ಮ ಇಲಾಖಾ ವಾಹನದ ಚಾಲಕನ ಮೂಲಕ ಅನುಪಮ ವೈನ್ಸ್ ಬಳಿಗೆ ಕೊಟ್ಟು ಬರಲು ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಹಣವನ್ನು ಅಮಾನತ್ತುಪಡಿಸಿಕೊಳ್ಳಲು ಹೊರಡಬೇಕು ಎನ್ನುವಷ್ಟರಲ್ಲಿ, ಸದರಿ ಜೀಪಿನ ಚಾಲಕನು ಖುದ್ದಾಗಿ ಕಛೇರಿಗೆ ಹಾಜರಾಗಿದ್ದು, ಅವರನ್ನು ಹಣದ ಬಗ್ಗೆ ವಿಚಾರಿಸಿದಾಗ ಅವರು ಆ.ಸ.ನೌ ರವರು ಹೇಳಿದಂತೆ ಹಣವನ್ನು ಪಡೆದಿದ್ದು, ಅದನ್ನು ಅನುಪಮ ವೈನ್ಸ್ ವೆಂಡರ್‌ಗೆ ನೀಡಿದ್ದು, ಅಬಕಾರಿ ಕಛೇರಿಗೆ ಲೋಕಾಯುಕ್ತ ಪೋಲಿಸರು ಬಂದಿರುವ ವಿಷಯವನ್ನು ಸಿಬ್ಬಂದಿಯವರಿಂದ ತಿಳಿದುಬಂದಿದ್ದು, ಪುನಃ ಸದರಿ ಅನುಪಮ ವೈನ್ಸ್ ವೆಂಡರ್‌ರವರಿಂದ ಆ ಹಣವನ್ನು ವಾಪಸ್ಸು ಪಡೆದು ಅದನ್ನು ತನ್ನ ಪ್ಯಾಂಟಿನ ಮುಂಭಾಗದ ಬಲಜೇಬಿನಲ್ಲಿ ಇಟ್ಟಿರುವುದಾಗಿ ತಿಳಿಸಿದ್ದು, ಅದನ್ನು ಪಂಚರಾದ ದಿವಾಕರ ಮೂಲಕ ತೆಗೆಸಿರುತ್ತೇನೆ ಅಂತಾ ನುಡಿದಿರುತ್ತಾರೆ. ಮಂಜುನಾಥ ಇವರಿಗೆ ಪ್ಯಾಂಟಿನ ಬದಲಿ ವ್ಯವಸ್ಥೆಯನ್ನು ಮಾಡಿ ಪ್ಯಾಂಟಿನ ಜೇಬನ್ನು ದ್ರಾವಣದಲ್ಲಿ

ತೊಳೆಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ಮಂಜುನಾಥ ಇವರು ನಿ.ಪಿ.4 ರಂತೆ ಆ.ಸ.ನೌ ರವರು ನಿ.ಪಿ.5 ರಂತೆ ತಮ್ಮ ಲಿಖಿತ ಸಮಜಾಯಿಷಿಯನ್ನು ಕೊಟ್ಟಿರುತ್ತಾರೆ.

25.ಮುಂದವರೆದು, ಕಛೇರಿಯಲ್ಲಿ ಹಾಜರಿದ್ದ ಅಬಕಾರಿ ಉಪ ನಿರೀಕ್ಷಕರಾದ ಶೈಲಜಾ ಎಂ.ಎಸ್ ಮತ್ತು ರಾಜೇಶ್ವರಿ, ಎಸ್.ಡಿ.ಎ ರವರಿಗೆ ಈಗಾಗಲೇ ಸಿ.ಡಿ.ಗೆ ವರ್ಗಾಯಿಸಿದ್ದ ಧ್ವನಿ ಸಂಭಾಷಣೆಯನ್ನು ಲಾಪ್‌ಟಾಪ್‌ಗೆ ಹಾಕಿ ಕೇಳಿಸಿದಾಗ ಆ.ಸ.ನೌ ರವರ ಧ್ವನಿಯನ್ನು ಗುರುತಿಸಿರುತ್ತಾರೆ. ಆ.ಸ.ನೌ ರವರು ಕರ್ತವ್ಯ ಮಾಡುತ್ತಿದ್ದ ಬಗ್ಗೆ ನಿ.ಪಿ.13 ರಂತೆ ಹಾಜರಾತಿ ಪುಸ್ತಕವನ್ನು ಪಡೆದಿರುತ್ತಾರೆ. ಅಲ್ಲಿ ನಿ.ಪಿ.6 ರಂತೆ ಟ್ರಾಪ್ ಮಹಜರ್‌ನ್ನು ಮಾಡಿರುತ್ತಾರೆ. ದೂರುದಾರರ ಮುಂದುವರೆದ ಹೇಳಿಕೆಯನ್ನು ನಿ.ಪಿ.14 ರಂತೆ ದಾಖಲಿಸಿಕೊಂಡಿರುತ್ತಾರೆ. ಟ್ರಾಪ್‌ನ ವೇಳೆಯಲ್ಲಿ ತೆಗೆದ ಛಾಯಾಚಿತ್ರಗಳನ್ನು ನಿ.ಪಿ.15ನ್ನು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ ರವರ ಸೇವಾ ವಿವರವನ್ನು ನಿ.ಪಿ.16; ದೂರುದಾರರು ಬ್ಯಾಂಕಿನಿಂದ ಹಣವನ್ನು ಡ್ರಾ ಮಾಡಿದ ಬಗ್ಗೆ ನಿ.ಪಿ.17ರ ಪ್ರತಿ; ಬ್ಯಾಂಕಿನವರು ನಿ.ಪಿ.18 ರಂತೆ ನೀಡಿದ ಪತ್ರ; ದೂರುದಾರರ ಮುಂದುವರೆದ ಹೇಳಿಕೆ ನಿ.ಪಿ.19; ಆ.ಸ.ನೌ ರವರ ವಾಹನದ ಬಗ್ಗೆ ಮಾಹಿತಿ ನಿ.ಪಿ.20; ಸ್ಥಳದ ನಕ್ಷೆ ನಿ.ಪಿ.21; ರಾಸಾಯನಿಕ ವರದಿ ನಿ.ಪಿ.22 ಹಾಗೂ ಅಭಿಯೋಜನಾ ಮಂಜೂರಾತಿ ನಿ.ಪಿ.23 ರಂತೆ ಗುರುತಿಸಿಕೊಂಡಿರುತ್ತಾರೆ.

26.ಆ.ಸ.ನೌ ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಚನ್ನರಾಯಪಟ್ಟಣದಲ್ಲಿ ದಿನಾಂಕ: 13/08/2014 ರಿಂದ 26/09/2014 ರವರೆಗೆ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದು, ಈ ಮೊದಲು ತಾನು ಚನ್ನರಾಯಪಟ್ಟಣದ ಅಬಕಾರಿ ಇಲಾಖೆಯಲ್ಲಿ ಏಪ್ರಿಲ್–2008 ರಿಂದ ಜೂನ್–2008 ರವರೆಗೆ ಪ್ರಭಾರ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. 2013ರಲ್ಲಿ ಇವರು ರಾಜ್ಯ ವಿಚಕ್ಷಣಾ ದಳ, ಬೆಂಗಳೂರು ಇಲ್ಲಿ ಕರ್ತವ್ಯದಲ್ಲಿದ್ದಾಗ ದಿನಾಂಕ: 27/06/2013

ರಂದು ಇವರ ಜಂಟಿ ಆಯುಕ್ತರ ಆದೇಶದ ಮೇಲೆಗೆ ಹಾಸನ ಜಿಲ್ಲೆಯ ಸಕಲೇಶಪುರ ಪೋಸ್ಟ್ ಹೆತ್ತೂರು ಹೋಬಳಿ ಒಳಲಹಳ್ಳಿ ಗ್ರಾಮದಲ್ಲಿರುವ ಕುಟಿಗೆಯಲ್ಲಿರುವ ಸಿಎಲ್-2 ಸನ್ನದು ಕದಂಬ ವೈನ್ಸ್‌ನ್ನು ತಪಾಸಣೆ ಮಾಡಲಾಗಿ ನಕಲಿ ಮದ್ಯ ದೊರೆತ ಮೇರೆಗೆ ಸದರಿ ಸನ್ನದುದಾರರ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ಅದು ದೂರುದಾರರ ಹೆಂಡತಿಯವರಿಗೆ ಸೇರಿದ್ದು ಇದ್ದು, ಆದ್ದರಿಂದ 7-8 ತಿಂಗಳವರೆಗೆ ಸನ್ನದು ಮುಚ್ಚಲಾಗಿತ್ತು ಅಂತಾ ನುಡಿದಿರುತ್ತಾರೆ. ಅದರಿಂದ ದೂರುದಾರರಿಗೆ ಮತ್ತು ಆತನ ಹೆಂಡತಿಗೆ ಆರ್ಥಿಕ ನಷ್ಟ ಉಂಟಾಗಿತ್ತು ಕಾರಣ ಇವರ ಮೇಲೆ ದ್ವೇಷ ಇತ್ತು ಅಂತಾ ನುಡಿದಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಪ್ರಕರಣ ದಾಖಲಾದ ಬಗ್ಗೆ, ಮಹಜರ್, ಅಮಾನತ್ತುಪಡಿಸಿಕೊಂಡ ಪ್ರತಿ, ರಿಮ್ಯಾಂಡ್ ಅರ್ಜಿ ಇವುಗಳನ್ನು ನಿ.ಡಿ.1 ರಿಂದ 4 ಅಂತಾ ಗುರುತಿಸಿಕೊಂಡಿರುತ್ತಾರೆ.

27. ದಿನಾಂಕ: 30/08/2014 ರಂದು ದೂರುದಾರರು ಇವರ ಕಛೇರಿಗೆ ಬಂದು ಅವರ ಕದಂಬ ಬಾರ್ & ರೆಸ್ಟೋರೆಂಟ್ ಹೊಂದಿರುವ ಕಟ್ಟಡ ಬಿರುಕುಬಿಟ್ಟಿದ್ದು ಆದುದರಿಂದ ಸದರಿ ಸನ್ನದನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರ ಮಾಡಿಕೊಳ್ಳಲು ಪ್ರಸ್ತುತ ಬಾರ್ ಇರುವ ಹಿಂಭಾಗದ ರಸ್ತೆಯಲ್ಲಿರುವ ಹೊಸ ಕಟ್ಟಡವನ್ನು ತೋರಿಸಲು ಕರೆದುಕೊಂಡು ಹೋಗಿದ್ದು, ಸದರಿ ಕಟ್ಟಡವನ್ನು ಪರಿಶೀಲನೆ ಮಾಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಅದೇ ದಿನ ಸಂಜೆ 5 ಗಂಟೆಗೆ ತಾನು ಹಾಸನದಲ್ಲಿದ್ದು ಅಬಕಾರಿ ಜಂಟಿ ಆಯುಕ್ತರ ಪ್ರಗತಿ ಪರಿಶೀಲನಾ ಸಭೆಗೆ ಹಾಜರಾಗಿದ್ದು, ತರುವಾಯ ಅಬಕಾರಿ ಉಪ ಆಯುಕ್ತರಾದ ಹೂವಪ್ಪ ಗೌಡ ಇವರ ಬೀಳ್ಕೊಡುಗೆ ಸಮಾರಂಭಕ್ಕೆ ಹಾಜರಾಗಿದ್ದು, ರಾತ್ರಿ 8 ಗಂಟೆಗೆ ಚನ್ನರಾಯಪಟ್ಟಣಕ್ಕೆ ಬಂದಿರುತ್ತೇನೆ ಅಂತಾ ನುಡಿದಿರುತ್ತಾರೆ. ಈ ಬಗ್ಗೆ 2 ಛಾಯಾಚಿತ್ರಗಳು ಹಾಗೂ ಹೂವಪ್ಪ ಗೌಡ ನಿವೃತ್ತಿ ಹೊಂದಿರುವ ಬಗ್ಗೆ ಅಧಿಸೂಚನೆಯನ್ನು ಹಾಜರುಪಡಿಸಿದ್ದು, ನಿ.ಡಿ.12 ಮತ್ತು 13 ಅಂತಾ ಗುರುತಿಸಿಕೊಂಡಿರುತ್ತಾರೆ.

28. ಮುಂದುವರೆದು ದಿನಾಂಕ: 04/09/2014 ರಂದು ದೂರುದಾರರು ಇವರ ಕಛೇರಿಗೆ ಬಂದು ಇವರನ್ನು ಭೇಟಿಯಾಗಿ ಅವರು ಸನ್ನದು ಇರುವ ಕಟ್ಟಡ ಬಿರುಕು ಬಿಟ್ಟಿರುವುದರಿಂದ ಅದನ್ನು

ಮುಚ್ಚಲು ಅರ್ಜಿಯನ್ನು ಕೊಡಬೇಕೆಂದು ಕೇಳಿದರು. ಅದಕ್ಕೆ ಆ.ಸ.ನೌರವರು ಸದರಿ ಅರ್ಜಿಯನ್ನು ನೇರವಾಗಿ ಅಬಕಾರಿ ಉಪ ಆಯುಕ್ತರಿಗೆ ಸಲ್ಲಿಸಬೇಕೆಂದು ತಿಳಿಸಿದಾಗ ಅದನ್ನು ದೂರುದಾರರು ಒಂದು ಕಚ್ಚಾ ಅರ್ಜಿಯನ್ನು ತಯಾರಿಸಿದ್ದೇನೆ ಅದನ್ನು ತಂದು ತೋರಿಸುತ್ತೇನೆ ಅಂತಾ ಹೇಳಿ ಕಛೇರಿಯಿಂದ ಹೊರಟು ಹೋದರು ಅಂತಾ ನುಡಿದಿರುತ್ತಾರೆ. ಮುಂದುವರೆದು ಗಸ್ತಿಗಾಗಿ ಹೋಗುತ್ತಿದ್ದಾಗ ಇವರ ಚಾಲಕ ಸಮಾಜ ಕಲ್ಯಾಣ ಇಲಾಖೆಯವರು ವಾಹನವನ್ನು ಖರೀದಿಸಲು ಅರ್ಜಿಯನ್ನು ನೀಡುತ್ತಿದ್ದಾರೆ ತೆಗೆದುಕೊಂಡು ಬರುತ್ತೇನೆ ಅಂತಾ ಹೇಳಿ ಜೀಪನ್ನು ನಿಲ್ಲಿಸಿದ್ದು ಆ ವೇಳೆಯಲ್ಲಿ ದೂರುದಾರರು ತಾನು ಬರೆದಿರುವ ಕಚ್ಚಾ ಅರ್ಜಿಯನ್ನು ತಂದಿರುತ್ತೇನೆ ಎಂದು ಹೇಳಿದರು. ದೂರುದಾರರ ವಾಹನ ರಸ್ತೆಯ ಮಧ್ಯದಲ್ಲಿ ನಿಂತಿದ್ದರಿಂದ ವಾಹನ ದತ್ತನೆಯಾಗಿದ್ದರಿಂದ ದೂರುದಾರರು ಅವರ ವಾಹನವನ್ನು ಮುಂದೆ ತೆಗೆದುಕೊಂಡು ಹೋದರು ಅಂತಾ ನುಡಿದಿರುತ್ತಾರೆ. ನಂತರ ಇವರು ತಮ್ಮ ವಾಹನ ಚಾಲಕರಿಗೆ ಆತನ ಅರ್ಜಿ ಹಾಗೂ ದೂರುದಾರರ ಕಚ್ಚಾ ಅರ್ಜಿಯನ್ನು ಎರಡನ್ನೂ ತೆಗೆದುಕೊಂಡು ಬರಬೇಕೆಂದು ಹೇಳಿ ವಾಹನದಲ್ಲಿ ಕುಳಿತಿದ್ದು, ಇವರ ವಾಹನ ಚಾಲಕ ಎಷ್ಟು ಹೊತ್ತಾದರು ಬರದೇ ಇದ್ದಿದ್ದರಿಂದ ತಾನು ವಾಹನವನ್ನು ಚಲಾಯಿಸಿಕೊಂಡು ಚನ್ನರಾಯಪಟ್ಟಣದ ಆಂಜನೇಯ ದೇವಸ್ಥಾನದ ಪಕ್ಕದಲ್ಲಿರುವ ರಸ್ತೆ ವಿಭಾಜಕದ ಮೂಲಕ ಬಂದು ಪಶು ವೈದ್ಯ ಆಸ್ಪತ್ರೆ ಬಳಿಯಲ್ಲಿ ಬರುತ್ತಿದ್ದಾಗ ಲೋಕಾಯುಕ್ತ ಪೋಲಿಸರು ಬಂದು ಇವರನ್ನು ತಡೆದು ತನ್ನ ವಾಹನವನ್ನು ತಪಾಸಣೆ ಮಾಡಿ ಹಣ ಎಲ್ಲಿದೆ ಅಂತಾ ಕೇಳಿದಾಗ ಇವರು ಹಣ ಇಲ್ಲ ಅಂತಾ ಹೇಳಿದಾಗ ಇವರು ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ಇವರ ಚಾಲಕರಿಗೆ ಫೋನು ಮಾಡಿ ಆತನು ಇವರ ಕಛೇರಿಗೆ ಬಂದಾಗ ಆತನ ಬಳಿಯಲ್ಲಿ ಏನು ಇರಲಿಲ್ಲ ಅದಕ್ಕೆ ತಾನು ದೂರುದಾರರು ಕೊಟ್ಟತಂಹ ಕಚ್ಚಾ ಅರ್ಜಿ ಎಲ್ಲಿದೆ ಎಂದು ಕೇಳಿದಾಗ ಆಗ ಆತ ಅನುಪಮ ವೈನ್ಸ್‌ನಲ್ಲಿ ಇಟ್ಟು ಹೋಗಿದ್ದೆ ಅಂತಾ ಹೇಳಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ಲೋಕಾಯುಕ್ತ ಪೋಲಿಸರು ಇವರ ಚಾಲಕರನ್ನು ಕರೆದುಕೊಂಡು ಹೋಗಿ ಅರ್ಧ ಗಂಟೆಯ ನಂತರ ಇವರ ಕಛೇರಿಗೆ ಮರಳಿ ಬಂದಿದ್ದು, ಇವರ ಮುಂದೆಯೇ ಆತನ ಜೇಬಿಗೆ ಒಂದು ಕವರ್‌ನ್ನು ಇಟ್ಟರು, ಆತನೇ ಅದನ್ನು ಜೇಬಿನಿಂದ ಹೊರತೆರೆಯುವಂತೆ ಛಾಯಾಚಿತ್ರವನ್ನು

ತೆಗೆದುಕೊಂಡರು, ಅದನ್ನು ತೆರೆದು ನೋಡಲಾಗಿ ಅದರಲ್ಲಿ ಹಣ ಇತ್ತು ಅಂತಾ ನುಡಿದಿರುತ್ತಾರೆ. ನಂತರ ಇವರಿಂದ ಮತ್ತು ಚಾಲಕರಿಂದ ಹೇಳಿಕೆಯನ್ನು ಬರೆಸಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ.

29.ಆ.ಸ.ನೌ ರವರು ತಮ್ಮ ಪರವಾಗಿ ಸದರಿ ಜೀಪ್ ಚಾಲಕರನ್ನು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 30/08/2014 ರಂದು ಮಧ್ಯಾಹ್ನ 2 ಗಂಟೆಗೆ ಟಾಟಾ ಸುಮೋ ವಾಹನದಲ್ಲಿ ಚನ್ನರಾಯಪಟ್ಟಣದಿಂದ ಆ.ಸ.ನೌರವರ ಜೊತೆಗೆ ಹಾಸನಕ್ಕೆ ಹೋಗಿದ್ದು, ಅಲ್ಲಿ ಆ.ಸ.ನೌ ರವರು ಸಂಜೆ 4.30 ರಿಂದ 5.30 ರವರೆಗೆ ಮೀಟಿಂಗ್‌ಗೆ ಹಾಜರಾಗಿದ್ದು, ನಂತರ ಸಂಜೆ 5.30 ರಿಂದ ಅಬಕಾರಿ ಡಿ.ಸಿ ಶ್ರೀ. ಹೂವಪ್ಪ ಗೌಡರ ಬೀಳ್ಕೊಡುಗೆ ಸಮಾರಂಭ ಜ್ಯುವೆಲ್ ರಾಕ್ ಸಭಾಂಗಣದಲ್ಲಿದ್ದು, ಸದರಿ ಕಾರ್ಯಕ್ರಮ ರಾತ್ರಿ 7.30 ಗಂಟೆಗೆ ಮುಗಿದಿದ್ದು, ಚನ್ನರಾಯಪಟ್ಟಣಕ್ಕೆ ಬಂದಾಗ ರಾತ್ರಿ 8.20 ಗಂಟೆಯಾಗಿತ್ತು ಅಂತಾ ನುಡಿದಿರುತ್ತಾರೆ.

30.ಮುಂದುವರೆದು ದಿನಾಂಕ: 04/09/2014 ರಂದು ಬೆಳಗ್ಗೆ 10.30 ಗಂಟೆಗೆ ಆ.ಸ.ನೌ ರವರ ಕಛೇರಿಗೆ ಬಂದಿದ್ದು, ಅವರ ಜೊತೆಗೆ ಗಸ್ತಿಗೆ ಹೋಗಿರುತ್ತೇನೆ ಅಂತಾ ನುಡಿದಿರುತ್ತಾರೆ. ನಂತರ ಇವರು ಹಾಸನ ರಸ್ತೆಗೆ ಬಂದು, ತಾಲ್ಲೂಕು ಕಛೇರಿ ವೃತ್ತದ ಹತ್ತಿರ ಹೋದಾಗ ದೂರುದಾರರು ಇವರ ಹಿಂದುಗಡೆ ಇನ್ನೋವಾ ಕಾರಿನಲ್ಲಿ ಬರುತ್ತಿದ್ದು, ದೂರುದಾರರು ವಾಹನವನ್ನು ನಿಲ್ಲಿಸಲು ಹೇಳಿದ್ದು, ಅದರಂತೆ ತಮ್ಮ ವಾಹನವನ್ನು ರಸ್ತೆ ಪಕ್ಕಕ್ಕೆ ನಿಲ್ಲಿಸಿರುತ್ತಾರೆ. ದೂರುದಾರರು ತಮ್ಮ ವಾಹನವನ್ನು ಇವರ ವಾಹನದ ಬಲಭಾಗದಲ್ಲಿ ನಿಲ್ಲಿಸಿ, ದೂರುದಾರರು ಒಂದು ಕವರ್‌ನ್ನು ಆ.ಸ.ನೌ ರವರಿಗೆ ಕೊಡಲು ಇವರ ಹತ್ತಿರ ಬಂದಿದ್ದು, ಅಷ್ಟರಲ್ಲಿ ಒಂದು ಬಸ್ ಬಂದಿದ್ದರಿಂದ ಇವರು ತಮ್ಮ ಜೀಪನ್ನು ಮುಂದಕ್ಕೆ ಹೋಗಿ ನಿಲ್ಲಿಸಿ, ನಂತರ ದೂರುದಾರರು ಇದ್ದತಂಹ ಇನ್ನೋವಾ ಕಾರ್ ಹತ್ತಿರ ಹೋಗಿ ಕವರ್‌ನ್ನು ತೆಗೆದುಕೊಂಡು ಬಂದಿರುತ್ತೇನೆ ಅಂತಾ ನುಡಿದಿರುತ್ತಾರೆ.

8-

31. ಮುಂದುವರೆದು ನಂತರ ಸದರಿ ಕವರ್‌ನ್ನು ತೆಗೆದುಕೊಂಡು ಅನುಪಮ ವೈನ್ಸ್ ಅಂಗಡಿಗೆ ಹೋಗಿ ಅದನ್ನು ಅಂಗಡಿಯಲ್ಲಿಟ್ಟು ನಂತರ ಸಮಾಜ ಕಲ್ಯಾಣ ಇಲಾಖೆಗೆ ಒಂದು ಅರ್ಜಿಯನ್ನು ತರಲು ಹೋಗಿದ್ದೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಸಮಾಜ ಕಲ್ಯಾಣ ಇಲಾಖೆಗೆ ಹೋದಾಗ ಅಲ್ಲಿ ವಿಷಯ ನಿರ್ವಾಹಕರು ಇರದ ಕಾರಣ ಸ್ವಲ್ಪ ಹತ್ತಿರ ನಿಂತಿದ್ದು, ಅಷ್ಟರಲ್ಲಿ ಅಬಕಾರಿ ಕಚೇರಿಯಿಂದ ವಿಷಯ ನಿರ್ವಾಹಕರಾದ ರಾಜೇಶ್ವರಿ ರವರು ತುರ್ತಾಗಿ ಕಛೇರಿಗೆ ಬರಲು ಫೋನ್ ಮಾಡಿ ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ತಾನು ಅಲ್ಲಿಂದ ಅಬಕಾರಿ ಕಛೇರಿಗೆ ಬಂದಿದ್ದು, ಅಲ್ಲಿ ಲೋಕಾಯುಕ್ತ ಪೋಲಿಸರು ಕವರ್ ಬಗ್ಗೆ ವಿಚಾರಣೆ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ಲೋಕಾಯುಕ್ತ ಪೋಲಿಸರು ತನಗೆ ಅನುಪಮ ವೈನ್ಸ್ ಅಂಗಡಿಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ಸದರಿ ಕವರ್‌ನ್ನು ತೆಗೆದುಕೊಂಡು ಕಚೇರಿಗೆ ಬಂದಿರುತ್ತೇವೆ ಅಂತಾ ನುಡಿದಿರುತ್ತಾರೆ.

32. ಮುಂದುವರೆದು ಕಛೇರಿಗೆ ಬಂದಾಗ ದೂರುದಾರರು ಇವರಿಗೆ ಇನ್ನೊಂದು ಕವರ್ ಕೊಟ್ಟಾಗ ತಾನು ಇಟ್ಟುಕೊಳ್ಳಲು ನಿರಾಕರಿಸಿದಾಗ ದೂರುದಾರರು ಇವರಿಗೆ ಬೆದರಿಸಿ ಒತ್ತಾಯ ಪೂರ್ವಕವಾಗಿ ಜೇಬಿನಲ್ಲಿ ಇಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ಇವರು ಪ್ಯಾಂಟಿನ ಜೇಬಿನಲ್ಲಿಟ್ಟ ಕವರ್‌ನ್ನು ಇವರೇ ತೆಗೆದುಕೊಟ್ಟಿದ್ದು, ಅದನ್ನು ಪೋಲಿಸರು ವಿಡಿಯೋ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಇವರ ಎರಡೂ ಕೈಗಳನ್ನು ದ್ರಾವಣದಲ್ಲಿ ತೊಳೆಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ನಂತರ ಪೋಲಿಸರು ಹೇಳಿದ ಹಾಗೆ ಬರೆಯಬೇಕು ಎಂದು ಹೇಳಿದ್ದರಿಂದ ಬರೆದುಕೊಟ್ಟಿರುತ್ತೇನೆ ಅಂತಾ ನುಡಿದಿರುತ್ತಾರೆ.

33. ಅದರಂತೆ ಒಬ್ಬ ಮಂಜುನಾಥ ವೈ.ಎನ್, ಕ್ಯಾಷಿಯರ್, ಅನುಪಮ ವೈನ್ಸ್, ಚನ್ನರಾಯಪಟ್ಟಣ ಇವರ ಸಾಕ್ಷಿಯನ್ನು ನುಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 04/09/2014 ರಂದು ತಾನು ಕ್ಯಾಷಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮಂಜುನಾಥ ಇವರು ತನ್ನ ಹತ್ತಿರ ಬೆಳಗ್ಗೆ 11.30ಕ್ಕೆ ಬಂದಿದ್ದು, ಇವರಿಗೆ ಎ-4 ಸೈಜ್‌ನ ಒಂದು ಕವರ್‌ನ್ನು ತಂದುಕೊಟ್ಟು ಅದನ್ನು

ಜೋಪಾನವಾಗಿ ಇಡಬೇಕು ನಂತರ ಬಂದು ತೆಗೆದುಕೊಂಡು ಹೋಗುತ್ತೇನೆ ಅಂತಾ ಹೇಳಿರುತ್ತಾರೆ ಅಂತಾ ನುಡಿದಿರುತ್ತಾರೆ. ಅದಾದ ಅರ್ಧ ಗಂಟೆಯ ನಂತರ ಮಂಜುನಾಥ ಮತ್ತು 3-4 ಜನರು ಬಂದು ಮಂಜುನಾಥ ಇವರು ತಾನು ಕೊಟ್ಟಿದ್ದ ಕವರ್‌ನ್ನು ಕೊಡಬೇಕೆಂದು ಕೇಳಿದಾಗ ತಾನು ಕವರ್‌ನ್ನು ಕೊಟ್ಟಿರುತ್ತೇನೆ ಅಂತಾ ನುಡಿದಿರುತ್ತಾರೆ. ಮರುದಿನ ಲೋಕಾಯುಕ್ತ ಪೋಲಿಸರು ತನ್ನ ಹತ್ತಿರ ಬಂದಿದ್ದು, ಒಂದು ದಾಖಲೆಗೆ ಸಹಿ ಮಾಡಬೇಕೆಂದು ಹೇಳಿದ್ದರಿಂದ, ಸಹಿ ಮಾಡಿರುತ್ತೇನೆ ಅಂತಾ ನುಡಿದಿರುತ್ತಾರೆ.

34. ಆ.ಸ.ನೌ ರವರ ಪ್ರಕಾರ ಚನ್ನರಾಯಪಟ್ಟಣದಲ್ಲಿ ಈ ಮೊದಲೇ ಸಹ ಏಪ್ರಿಲ್-2008 ರಿಂದ 30 ಜೂನ್ 2008 ರವರೆಗೆ ಪ್ರಭಾರ ಅಬಕಾರಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ದೂರುದಾರರು ಅವರ ಅಣ್ಣನ ಸನ್ನದುಗಳನ್ನು ಸಹ ನೋಡಿಕೊಳ್ಳುತ್ತಿದ್ದಾಗ, ದೂರುದಾರರ ಅಣ್ಣನ ಸನ್ನದು ಬಿ.ಎಸ್.ಎನ್.ಎಲ್ ಕಛೇರಿಗೆ ಸಮೀಪ ಇರುವುದರಿಂದ ಆ.ಸ.ನೌ ರವರು ನವೀಕರಣಕ್ಕೆ ಆಕ್ಷೇಪಣೆಯನ್ನು ಸಲ್ಲಿಸಿದ್ದರಿಂದ ಸನ್ನದನ್ನು ಬೇರೆ ಕಡೆಗೆ ಸ್ಥಳಾಂತರಿಸಿದ್ದ ದೂರುದಾರರಿಗೆ ಇವರ ಮೇಲೆ ವೈಷಮ್ಯವಿತ್ತು ಅಂತಾ ವಾದ ಇರುತ್ತದೆ. ಆದರೆ ಇದರ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಮುಂದುವರೆದು 2013ರಲ್ಲಿ ಇವರು ರಾಜ್ಯ ವಿಕ್ಷಣಾ ದಳ, ಬೆಂಗಳೂರು ಇಲ್ಲಿ ಕರ್ತವ್ಯದಲ್ಲಿದ್ದಾಗ ದಿನಾಂಕ: 27/06/2013 ರಂದು ಇವರ ಜಂಟಿ ಆಯುಕ್ತರ ಆದೇಶದ ಮೇರೆಗೆ ಹಾಸನ ಜಿಲ್ಲೆಯ ಸಕಲೇಶಪುರ ಪೋಸ್ಟ್ ಹೆತ್ತೂರು ಹೋಬಳಿ ಒಳಲಹಳ್ಳಿ ಗ್ರಾಮದಲ್ಲಿರುವ ಕುಟಿಗೆಯಲ್ಲಿರುವ ಸಿಎಲ್-2 ಸನ್ನದು ಕದಂಬ ವೈನ್ಸ್‌ನ್ನು ತಪಾಸಣೆ ಮಾಡಲಾಗಿ ನಕಲಿ ಮಧ್ಯ ದೊರೆತ ಮೇರೆಗೆ ಸದರಿ ಸನ್ನದುದಾರರ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ಅದು ದೂರುದಾರರ ಹೆಂಡತಿಯವರಿಗೆ ಸೇರಿದ್ದು ಇದ್ದು, ಆದ್ದರಿಂದ 7-8 ತಿಂಗಳವರೆಗೆ ಸನ್ನದು ಮುಚ್ಚಲಾಗಿತ್ತು ಅಂತಾ ನುಡಿದಿರುತ್ತಾರೆ. ಅದರಿಂದ ದೂರುದಾರರಿಗೆ ಮತ್ತು ಆತನ ಹೆಂಡತಿಗೆ ಆರ್ಥಿಕ ನಷ್ಟ ಉಂಟಾಗಿತ್ತು ಕಾರಣ ಇವರ ಮೇಲೆ ದ್ವೇಷ ಇತ್ತು ಅಂತಾ ನುಡಿದಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಪ್ರಕರಣ ದಾಖಲಾದ ಬಗ್ಗೆ,

ಮಹಜರ್, ಅಮಾನತ್ತುಪಡಿಸಿಕೊಂಡ ಪ್ರತಿ, ರಿಮ್ಯಾಂಡ್ ಅರ್ಜಿ ಇವುಗಳನ್ನು ನಿ.ಡಿ.1 ರಿಂದ 4 ಅಂತಾ ಗುರುತಿಸಿಕೊಂಡಿರುತ್ತಾರೆ.

35. ಈ ವಿಷಯದ ಬಗ್ಗೆ ಪಿ.ಡಬ್ಲ್ಯೂ.1 ಇವರಿಗೆ ಪಾಟಿಸವಾಲಿನಲ್ಲಿ ಕೇಳಿದಾಗ ಈ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಅಂತಾ ನುಡಿದಿರುತ್ತಾರೆ. ನಿ.ಡಿ.1 ರಿಂದ 4ನ್ನು ಪರಿಶೀಲಿಸಿದಾಗ ದೂರುದಾರರ ಹೆಂಡತಿಯ ವಿರುದ್ಧ ಪ್ರಕರಣವನ್ನು ದಾಖಲಾಗಿರುತ್ತದೆ ಅಂತಾ ಕಂಡುಬರುತದೆ. ಆ.ಸ.ನೌ ರವರು ತಮ್ಮ ಸಮಜಾಯಿಷಿಯನ್ನು ಬರೆದುಕೊಟ್ಟಿದ್ದು, ಅದನ್ನು ನಿ.ಪಿ.5 ಅಂತಾ ಗುರುತಿಸಲಾಗಿರುತ್ತದೆ. ತಾವು ನಿ.ಪಿ.5 ರಂತೆ ಸಮಜಾಯಿಷಿಯನ್ನು ಬರೆದುಕೊಟ್ಟ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಮಂಡನಾಧಿಕಾರಿಗಳು ಪಾಟಿಸವಾಲು ಮಾಡಿದಾಗ ಈ ವಿಷಯದ ಬಗ್ಗೆ ತಾನು ತನ್ನ ಲಿಖಿತ ಸಮಜಾಯಿಷಿಯಲ್ಲಿ ದೂರುದಾರರ ಹೆಂಡತಿಯ ವಿರುದ್ಧ ನಕಲು ಮದ್ಯ ಮಾರಾಟಕ್ಕೆ ಸಂಬಂಧಪಟ್ಟಂತೆ ದೂರನ್ನು ದಾಖಲಿಸಿದ್ದರಿಂದ, ದೂರುದಾರರಿಗೆ ಇವರ ಮೇಲೆ ದ್ವೇಷ ಇತ್ತು ಎನ್ನುವುದನ್ನು ಗಾಬರಿಯಿಂದ ತನ್ನ ಸಮಜಾಯಿಷಿಯಲ್ಲಿ ಬರೆದು ತಿಳಿಸಿರುವುದಿಲ್ಲ ಹಾಗೂ ದೂರುದಾರರ ಅಣ್ಣನ ಮದ್ಯದ ಸನ್ನದು ಬಿ.ಎಸ್.ಎನ್.ಎಲ್ ಕಛೇರಿ ಸಮೀಪ ಇರುತ್ತದೆ ಎನ್ನುವ ಕಾರಣಕ್ಕಾಗಿ ತಾನು ಸ್ಥಳಾಂತರ ಮಾಡಿರುತ್ತೇನೆ. ಆದ್ದರಿಂದ ದೂರುದಾರರಿಗೆ ಇವರ ಮೇಲೆ ದ್ವೇಷ ಇತ್ತು ಅಂತಾ ತಾನು ಲಿಖಿತ ಸಮಜಾಯಿಷಿಯಲ್ಲಿ ತಿಳಿಸಿರುತ್ತೇನೆ ಅಂತಾ ಒಪ್ಪಿಕೊಂಡಿರುತ್ತಾರೆ. ಪಿ.ಡಬ್ಲ್ಯೂ.1 ಇವರ ಸಂಪೂರ್ಣ ಪಾಟಿಸವಾಲನ್ನು ಪರಿಶೀಲಿಸಿದಾಗ ದೂರುದಾರರ ಬಗ್ಗೆ ಮತ್ತು ಆ.ಸ.ನೌ ರವರ ನಡುವೆ ಇದ್ದ ವೈಮನಸ್ಸಿನ ಬಗ್ಗೆ ಕೇಳಿದ್ದು ಹೊರತು ಪ್ರಕರಣದ ಉಳಿದ ವಿಷಯದ ಬಗ್ಗೆ ಕೇಳಿರುವುದಿಲ್ಲ.

36. ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಆ.ಸ.ನೌ ರವರ ಕಛೇರಿಗೆ ಹಣ ತೆಗೆದುಕೊಂಡು ಹೋದಾಗ ಆ.ಸ.ನೌ ರವರು ಇಲ್ಲಿ ಹಣ ಕೊಡುವುದು ಬೇಡ, ತಾನು ಸರ್ಕಾರಿ ಜೀಪಿನಲ್ಲಿ ಆದ್ಯಸ್ಯ ಹೋಟೆಲ್ ಕಡೆಗೆ ಹೋಗುತ್ತಿದ್ದು ತಮ್ಮನ್ನು ಹಿಂಭಾಲಿಸಿ ಬರುವಂತೆ ಹೇಳಿದ್ದು, ಅದರಂತೆ ವಾಹನವನ್ನು ಹಿಂಭಾಲಿಸಿಕೊಂಡು ಹೋಗುವಾಗ ಆ.ಸ.ನೌ ರವರು ಚನ್ನರಾಯಪಟ್ಟಣ

ಹಳೇ ಬಸ್ ನಿಲ್ದಾಣದ ಬಳಿ ವಾಹನವನ್ನು ನಿಲ್ಲಿಸಿದಾಗ. ದೂರುದಾರರು ತನ್ನ ವಾಹನವನ್ನು ಅವರ ವಾಹನದ ಪಕ್ಕಕ್ಕೆ ನಿಲ್ಲಿಸಿದಾಗ, ಆ.ಸ.ನೌ ರವರು ರೂ.2 ಲಕ್ಷಗಳ ಲಂಚದ ಹಣವನ್ನು ಆ.ಸ.ನೌ ರವರು ಇದ್ದ ಜೀಪಿನ ಚಾಲಕ ಮಂಜುನಾಥನ ಬಳಿ ಕೊಡುವಂತೆ ಹೇಳಿದ ಕಾರಣ ತಾನು ರೂ.2 ಲಕ್ಷ ಹಣ ಇದ್ದ ಕವರ್‌ನ್ನು ಮಂಜುನಾಥ ರವರಿಗೆ ಕೊಟ್ಟಿರುತ್ತೇನೆ ಅಂತಾ ನುಡಿದಿರುತ್ತಾರೆ. ಆದರೆ ಇದರ ಬಗ್ಗೆ ಆ.ಸ.ನೌ ಪರ ವಕೀಲರು ಯಾವುದೇ ಪಾಟಿಸವಾಲನ್ನು ಮಾಡಿರುವುದಿಲ್ಲ ಮತ್ತು ಈ ವಿಷಯವನ್ನು ಅಲ್ಲಗಳೆದಿರುವುದಿಲ್ಲ.

37. ಆ.ಸ.ನೌ ರವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 04/09/2014 ರಂದು ದೂರುದಾರರು ಇವರ ಕಛೇರಿಗೆ ಬಂದು ಒಪ್ಪಿಕೊಂಡಿರುತ್ತಾರ. ಆದರೆ ಆ ದಿವಸ ದೂರುದಾರರು ಅವರು ನಡೆಸುತ್ತಿದ್ದ ಸನ್ನದು ಕಟ್ಟಡ ಬಿರುಕು ಬಿಟ್ಟಿದ್ದರಿಂದ ಅದನ್ನು ಮುಚ್ಚಲು ಅರ್ಜಿ ಕೊಡಬೇಕೆಂದು ಕೇಳಿದರು ಅಂತಾ ನುಡಿದಿರುತ್ತಾರೆ. ಆ.ಸ.ನೌ ರವರು ದೂರುದಾರರಿಗೆ ಆ ಅರ್ಜಿಯನ್ನು ನೇರವಾಗಿ ಅಬಕಾರಿ ಉಪ ಆಯುಕ್ತರಿಗೆ ಸಲ್ಲಿಸಿ ಎಂದು ತಿಳಿಸಿದಾಗ, ದೂರುದಾರರು ಒಂದು ಕಚ್ಚಾ ಅರ್ಜಿಯನ್ನು ತಯಾರಿಸಿರುತ್ತೇನೆ ಅದನ್ನು ತಂದು ತೋರಿಸುತ್ತೇನೆ ಅಂತಾ ಹೇಳಿ ಆ.ಸ.ನೌ ರವರ ಕಛೇರಿಯಿಂದ ಹೋದರು ಅಂತಾ ನುಡಿದಿರುತ್ತಾರೆ.

38. ಮುಂದುವರೆದು ಡಿ.ಡಬ್ಲ್ಯೂ.1 ಇವರು ತಾನು ಗಸ್ತಿಗಾಗಿ ಕಚೇರಿಯಿಂದ ಹೊರಟು ಚನ್ನರಾಯಪಟ್ಟಣದ ಪೋಲಿಸ್ ಠಾಣೆಯ ಐ.ಬಿ.ಗೆ ಹೋಗುವ ದಾರಿಯಲ್ಲಿ ಹೋಗುತ್ತಿದ್ದಾಗ, ದೂರುದಾರರು ತಮ್ಮ ವಾಹನದಲ್ಲಿ ಬಂದು ತಾನು ಬರೆದಿರುವ ಕಚ್ಚಾ ಅರ್ಜಿಯನ್ನು ತಂದಿರುತ್ತೇನೆ ಅಂತಾ ಹೇಳಿದ್ದು, ಅಲ್ಲಿ ದೂರುದಾರರ ವಾಹನವು ರಸ್ತೆಯ ಮಧ್ಯದಲ್ಲಿ ನಿಂತಿದ್ದರಿಂದ ವಾಹನ ದಟ್ಟನೆ ಆಗಿದ್ದರಿಂದ ದೂರುದಾರರು ತಮ್ಮ ವಾಹನವನ್ನು ಮುಂದಕ್ಕೆ ತೆಗೆದುಕೊಂಡು ಹೋಗಿರುತ್ತಾರೆ ಅಂತಾ ನುಡಿದಿರುತ್ತಾರೆ. ಆಗ ಆ.ಸ.ನೌ ರವರು ಇವರ ಚಾಲಕರಿಗೆ ದೂರುದಾರರ ಕಚ್ಚಾ ಅರ್ಜಿಯನ್ನು ತೆಗೆದುಕೊಂಡು ಬರಲು ಹೇಳಿದ್ದ, ನಂತರ

ವಾಹನದ ಚಾಲಕ ಎಷ್ಟು ಹೊತ್ತಾದರು ಬರೆದೆ ಇರುವುದರಿಂದ ಆ.ಸ.ನೌ ರವರು ತಾವೇ ತಮ್ಮ ಜೀಪನ್ನು ಚಾಲನೆ ಮಾಡಿಕೊಂಡು ಪಶು ವೈದ್ಯ ಆಸ್ಪತ್ರೆಗೆ ಬಳಿಯಲ್ಲಿ ಬರುತ್ತಿದ್ದಾಗ ಲೋಕಾಯುಕ್ತ ಪೋಲಿಸರು ತಡೆದಿರುತ್ತಾರೆ ಹಾಗೂ ಇವರನ್ನು ಹಣದ ಬಗ್ಗೆ ವಿಚಾರಿಸಿದಾಗ ಆ.ಸ.ನೌ ರವರು ಹಣವಿಲ್ಲವೆಂದು ನುಡಿದಿರುತ್ತಾರೆ.

39. ಈ ಇಬ್ಬರ ಸಾಕ್ಷಿಯನ್ನು ಪರಿಗಣಿಸಿದಾಗ ಆ.ಸ.ನೌ ರವರು ಹೇಳಿದ ಹಾಗೆ ದೂರುದಾರ ಇವರ ಕಛೇರಿಯಿಂದ ಹೋಗಿದ್ದೇ ಆದರೆ, ದೂರುದಾರರಿಗೆ ಆ.ಸ.ನೌ ರವರು ಎಲ್ಲಿ ಹೋಗುತ್ತಿದ್ದರು ಎನ್ನುವುದು ಹೇಗೆ ಗೊತ್ತಾಗಿರುತ್ತದೆ ಅಂತಾ ಅರ್ಥವಾಗಿರುವುದಿಲ್ಲ. ಆ.ಸ.ನೌ ರವರು ದೂರುದಾರರನ್ನು ಹಿಂಬಾಲಿಸಿಕೊಂಡು ಬರಬೇಕೆಂದು ಹೇಳದೇ ಇದ್ದಾಗ ದೂರುದಾರರು ಇವರನ್ನು ಹಿಂಭಾಲಿಸಿಕೊಂಡು ಏಕೆ ಹೋಗಿರುತ್ತಾರೆ ಎಂದು ಅರ್ಥವಾಗಿರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಆ.ಸ.ನೌ ರವರು ಹೇಳಿದ್ದರಿಂದಲೇ ದೂರುದಾರರು ಆ.ಸ.ನೌ ರವರ ವಾಹನವನ್ನು ಹಿಂಭಾಲಿಸಿಕೊಂಡು ಹೋಗಿರುತ್ತಾರೆ ಅಂತಾ ಕಂಡುಬರುತ್ತದೆ. ಅಲ್ಲದೇ ಆ.ಸ.ನೌ ರವರ ಪ್ರಕಾರ ದೂರುದಾರರಿಗೆ ಅರ್ಜಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಹೇಳಿದ್ದು, ಹಾಗಾದರೂ ಇವರೇಕೆ ಸದರಿ ಕಚ್ಚಾ ಅರ್ಜಿಯನ್ನು ಪಡೆದುಕೊಳ್ಳು ವಾಹನ ಚಾಲಕರಿಗೆ ಏಕೆ ತಿಳಿಸಿರುತ್ತಾರೆ ಅಂತಾ ಅರ್ಥವಾಗಿರುವುದಿಲ್ಲ.

40. ಪಿ.ಡಬ್ಲ್ಯೂ.2 ನೆರಳು ಸಾಕ್ಷಿದಾರರು ಇವರು ಸಹ ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರುದಾರರ ಜೊತೆಗೆ ಆ.ಸ.ನೌ ರವರ ಕಛೇರಿಗೆ ಹೋಗಿದ್ದು, ಅಲ್ಲಿ ಆ.ಸ.ನೌ ರವರು ಹಣ ಪಡೆಯಲಿಲ್ಲ, ಬೇರೊಂದು ಸ್ಥಳಕ್ಕೆ ಬರಲು ಹೇಳಿರುತ್ತಾರೆ ಅಂತಾ ನುಡಿದಿರುತ್ತಾರೆ. ಆ.ಸ.ನೌ ರವರು ಹೋಗುತ್ತಿದ್ದ ವಾಹನದ ಹಿಂಬದಿಯಲ್ಲಿ ಇವರು ದೂರುದಾರರ ವಾಹನದಲ್ಲಿ ಹೋಗಿದ್ದು, ಆ.ಸ.ನೌ ರವರು ಅವರ ಜೀಪನ್ನು ಬಸ್ ನಿಲ್ದಾಣದ ಹತ್ತಿರ ನಿಲ್ಲಿಸಿದ್ದು, ಅಲ್ಲಿ ಚಾಲಕ ಮಂಜುನಾಥನು ಇವರ ವಾಹನದ ಬಳಿಗೆ ಆ.ಸ.ನೌ ರವರು ಕಳುಹಿಸದ್ದು, ಆ ಮಂಜುನಾಥ ದೂರುದಾರರಿಂದ ಹಣವನ್ನು ಪಡೆದು ಜನರ ಮಧ್ಯದಲ್ಲಿ ಹೋಗಿಬಿಟ್ಟನು ಅಂತಾ ನುಡಿದಿರುತ್ತಾರೆ.

ಈ ವಿಷಯದ ಬಗ್ಗೆ ಆ.ಸ.ನೌ ಪರ ವಕೀಲರು ಪಾಟಿ ಸವಾಲಿನಲ್ಲಿ ಏನೂ ಕೇಳಿರುವುದಿಲ್ಲ ಮತ್ತು ಈ ವಿಷಯವನ್ನು ಅಲ್ಲಗಳೆದಿರುವುದಿಲ್ಲ.

41. ತನಿಖಾಧಿಕಾರಿಗಳು (ಪಿ.ಡಬ್ಲ್ಯೂ.3) ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರುದಾರರು ಇವರಿಗೆ ಫೋನು ಮಾಡಿ ಆ.ಸ.ನೌ ರವರು ಕಛೇರಿಯಲ್ಲಿ ಹಣ ಕೊಡುವುದು ಬೇಡ ಹೋಟೆಲ್ ಕಡೆಗೆ ಹೋಗೋಣ ಬನ್ನಿ ಎಂದು ಹೇಳಿ ತಮ್ಮ ಇಲಾಖಾ ವಾಹನವನ್ನು ಹಿಂಬಾಲಿಸಿಕೊಂಡು ಬರಲು ಹೇಳಿದ್ದು, ಆ ಪ್ರಕಾರ ತಾನು ಹಿಂಬಾಲಿಸಿಕೊಂಡು ಹೋಗುತ್ತಿದ್ದು, ತಮಗೂ ಸಹ ಬರಲು ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಅದರಂತೆ ಇವರು ದೂರುದಾರರ ವಾಹನವನ್ನು ಹಿಂಬಾಲಿಸುತ್ತಿದ್ದಾಗ, ಆ.ಸ.ನೌ ರವರು ತಮ್ಮ ವಾಹನವನ್ನು ನಿಲ್ಲಿಸಿದ್ದು, ನಂತರ ಇವರೂ ಸಹ ತಮ್ಮ ವಾಹನವನ್ನು ನಿಲ್ಲಿಸಿ ಗಮನಿಸುತ್ತಿದ್ದರು ಅಂತಾ ನುಡಿದಿರುತ್ತಾರೆ. ನಂತರ ವಾಹನದ ಚಾಲಕ ದೂರುದಾರರ ವಾಹನದ ಬಳಿ ಬಂದು ದೂರುದಾರರಿಂದ ಲಕೋಟೆಯನ್ನು ಪಡೆದು ಜನಸಂದಣಿಯಲ್ಲಿ ಮರೆಯಾದ ಅಂತಾ ನುಡಿದಿರುತ್ತಾರೆ. ಇವರ ಪಾಟಿಸವಾಲಿನಲ್ಲಿ ಮಂಜುನಾಥ ಈತನು ಆ.ಸ.ನೌ ರವರ ಹೇಳಿಕೆ ಮೇರೆಗೆ ಹಣವನ್ನು ಪಡೆದಿರುವುದಿಲ್ಲ ಅಂತಾ ಮಾತ್ರ ಸಲಹೆ ಮಾಡಿರುತ್ತಾರೆ.

42. ಪಿ.ಡಬ್ಲ್ಯೂ.1 ರಿಂದ 3 ಹಾಗೂ ಡಿ.ಡಬ್ಲ್ಯೂ.1, 2 ಮತ್ತು 3 ಇವರ ಸಾಕ್ಷಿಯನ್ನು ಪರಿಗಣಿಸಿದಾಗ, ದಿನಾಂಕ: 04/09/2014 ರಂದು ಆ.ಸ.ನೌ ರವರ ವಾಹನವನ್ನು ದೂರುದಾರರು ಹಿಂಬಾಲಿಸುತ್ತಿದ್ದು ಹಾಗೂ ದೂರುದಾರರು ವಾಹನವನ್ನು ಪೋಲಿಸರು ಹಿಂಬಾಲಿಸುತ್ತಿದ್ದರು ಅಂತಾ ಕಂಡುಬಂದಿರುತ್ತದೆ. ಆ.ಸ.ನೌ ರವರ ಪ್ರಕಾರ ಇವರು ದೂರುದಾರರನ್ನು ಹಿಂಬಾಲಿಸಿ ಬರಲು ಹೇಳದೇ ಇದ್ದರೆ ದೂರುದಾರರಿಗೆ ಆ.ಸ.ನೌ ರವರು ತಮ್ಮ ಇಲಾಖಾ ವಾಹನದಲ್ಲಿ ಎಲ್ಲಿ ಮತ್ತು ಯಾವ ಕಡೆಗೆ ಹೋಗುತ್ತಿದ್ದರು ಎನ್ನುವ ಬಗ್ಗೆ ಆ.ಸ.ನೌ ರವರು ಸಮಂಜಸ ಉತ್ತರ ನೀಡಿರುವುದಿಲ್ಲ. ಅಲ್ಲದೇ, ಮಂಜುನಾಥ ಇವರು ದೂರುದಾರರಿಂದ ಖಾಕಿ ಕವರ್‌ನ್ನು ಪಡೆದುಕೊಂಡ ಬಗ್ಗೆ ಆ.ಸ.ನೌ ರವರು ಒಪ್ಪಿಕೊಳ್ಳುತ್ತಾರೆ. ಆ.ಸ.ನೌ ರವರ ಪ್ರಕಾರ ಅದು

ದೂರುದಾರರು ಸದರಿ ಖಾಕಿ ಕವರ್‌ನಲ್ಲಿ ಅರ್ಜಿಯನ್ನು ಕೊಟ್ಟಿದ್ದು ಇರುತ್ತದೆ ಅಂತಾ ವಾದ ಇರುತ್ತದೆ. ಆದರೆ ಶಿಸ್ತುಪ್ರಾಧಿಕಾರದ ಪ್ರಕಾರ ಮಂಜುನಾಥ ಈತನು ಆ.ಸ.ನೌ ರವರು ಹೇಳಿದ ಮೇರೆಗೆ ದೂರುದಾರರ ವಾಹನದ ಹತ್ತಿರ ಬಂದು ಹಣವಿದ್ದ ಖಾಕಿ ಕವರ್‌ನ್ನು ಪಡೆದುಕೊಂಡಿರುತ್ತಾರೆ ಅಂತಾ ವಾದ ಇರುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿ ಏನೆಂದರೆ ವಾಹನ ಚಾಲಕ ಮಂಜುನಾಥ ಈತನು ಆ.ಸ.ನೌ ರವರು ತಿಳಿಸಿದ ಆ ಖಾಕಿ ಕವರ್‌ನ್ನು ಅನುಪಮ ವೈನ್ಸ್ ಅಂಗಡಿಗೆ ಹೋಗಿ ಏಕೆ ಕೊಟ್ಟಿರುತ್ತಾರೆ ಅಂತಾ ಅರ್ಥವಾಗುವುದಿಲ್ಲ. ಅನುಪಮ ವೈನ್ಸ್ ಮಾಲೀಕರನ್ನು ಡಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿದ್ದು, ಅವರು ಸಹ ಮಂಜುನಾಥ ಈತನು ಖಾಕಿ ಕವರ್‌ನ್ನು ತಂದುಕೊಟ್ಟ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಅಲ್ಲದೇ, ಮಂಜುನಾಥ ಈತನು ಸದರಿ ಖಾಕಿ ಕವರ್‌ನ್ನು ಜೋಪಾನವಾಗಿ ಇಟ್ಟುಕೊಳ್ಳಲು ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಆ.ಸ.ನೌ ರವರ ಪ್ರಕಾರ ಅದು ಒಂದು ಕಚ್ಚಾ ಅರ್ಜಿಯಾಗಿದ್ದೇ ಆದರೆ ಅದನ್ನು ಅಷ್ಟು ಜೋಪಾನವಾಗಿ ಇಡಲು ಮಂಜುನಾಥ ಏಕೆ ಹೇಳಿರುತ್ತಾರೆ ಅಂತಾ ತಿಳಿದುಬರುವುದಿಲ್ಲ. ಇದರಿಂದ ಕಂಡುಬರುವುದೇನೆಂದರೆ ಮಂಜುನಾಥ ಈತನು ಆ.ಸ.ನೌ ರವರ ಹೇಳಿಕೆಯ ಮೇರೆಗೆ ಹಣವಿದ್ದ ಕವರ್‌ನ್ನು ಪಡೆದುಕೊಂಡು ಜನಸಂದಣಿಯಲ್ಲಿ ಮರೆಯಾಗಿ ಅದನ್ನು ಆ.ಸ.ನೌ ರವರ ನಿರ್ದೇಶನದಂತೆ ಅನುಪಮ ವೈನ್ಸ್‌ಗೆ ಕೊಟ್ಟು ಬಂದಿರುತ್ತಾರೆ ಅಂತಾ ನನ್ನ ಅಭಿಪ್ರಾಯದಲ್ಲಿ ಸ್ಪಷ್ಟವಾಗಿ ತಿಳಿದುಬಂದಿರುತ್ತದೆ. ಅದು ಕಚ್ಚಾ ಅರ್ಜಿಯಾಗಿದ್ದರೇ ಆ.ಸ.ನೌ ರವರೇ ತಮ್ಮ ಜೀಪಿನಲ್ಲಿ ಇಟ್ಟುಕೊಳ್ಳಬಹುದಾಗಿತ್ತು ಹಾಗೂ ತನಿಖಾಧಿಕಾರಿಗಳು ಕೇಳಿದಾಗ ಅದನ್ನೇ ಹಾಜರುಪಡಿಸಬಹುದಾಗಿತ್ತು. ಆದರೆ ಇವರು ಹಾಗೆ ಮಾಡಿರುವುದಿಲ್ಲ.

43. ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರನ್ನು ಲೋಕಾಯುಕ್ತ ಪೋಲಿಸರು ಬಸ್ ನಿಲ್ದಾಣದ ಬಳಿ ಸುತ್ತುವರೆದು ಜೀಪನ್ನು ತಡೆದು, ಆ.ಸ.ನೌ ರವರಿಗೆ ಹಣದ ಬಗ್ಗೆ ವಿಚಾರಿಸಿದಾಗ ಅವರು ತಮ್ಮ ಜೀಪ್ ಚಾಲಕ ಮಂಜುನಾಥ ರವರು ಹಣ ತೆಗೆದುಕೊಂಡು ಹೋದ ಬಗ್ಗೆ ಹೇಳಿರುತ್ತಾರೆ ಅಂತಾ ನುಡಿದಿದ್ದು, ನಂತರ ಆ.ಸ.ನೌ ರವರನ್ನು ಅವರ ಕಛೇರಿಗೆ

ಕರೆದುಕೊಂಡು ಬಂದಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ತನಿಖಾಧಿಕಾರಿಗಳು ಮಂಜುನಾಥ ಇವರನ್ನು ಕರೆಸುವ ಪ್ರಯತ್ನ ಮಾಡುವಾಗ, ಮಂಜುನಾಥ ರವರು ಆ.ಸ.ನೌ ರವರ ಕಛೇರಿಗೆ ಮರಳಿ ಬಂದಿದ್ದು, ತನಿಖಾಧಿಕಾರಿಗಳು ಮಂಜುನಾಥ ರವರಿಗೆ ಹಣದ ಬಗ್ಗೆ ವಿಚಾರಿಸಿದಾಗ ಅವರು ಆ.ಸ.ನೌ ರವರ ಹೇಳಿಕೆ ಮೇರೆಗೆ ತಾನು ಪಡೆದಿದ್ದ ರೂ.2 ಲಕ್ಷ ಹಣವನ್ನು ಅನುಪಮ ವೈನ್ಸ್ ಅಂಗಡಿಯ ಕ್ಯಾಷಿಯರಿಗೆ ಕೊಟ್ಟು ಬಂದ ಬಗ್ಗೆ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಮಂಜುನಾಥ ರವರನ್ನು ಅನುಪಮ ವೈನ್ಸ್ ಅಂಗಡಿಗೆ ಕರೆದುಕೊಂಡು ಹೋಗಿ ರೂ.2 ಲಕ್ಷ ಹಣವನ್ನು ಮರಳಿ ತೆಗೆದುಕೊಂಡು ಬಂದಿರುತ್ತಾರೆ ಅಂತಾ ನುಡಿದಿರುತ್ತಾರೆ. ಇವರ ಪಾಟಿಸವಾಲಿನಲ್ಲಿ ಈ ಮೇಲಿನ ವಿಷಯದ ಬಗ್ಗೆ ಪಾಟಿಸವಾಲು ಮಾಡಿರುವುದಿಲ್ಲ ಹಾಗೂ ಅಲ್ಲಗಳೆದಿರುವುದಿಲ್ಲ. ಪಿ.ಡಬ್ಲ್ಯೂ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಬಕಾರಿ ಕಛೇರಿಯಲ್ಲಿ ಆ.ಸ.ನೌ ರವರನ್ನು ತನಿಖಾಧಿಕಾರಿಗಳು ವಿಚಾರಣೆ ಮಾಡಿದಾಗ, ಆ.ಸ.ನೌ ರವರು ಫೋನ್ ಮಾಡಿ ಚಾಲಕ ಮಂಜುನಾಥನನ್ನು ಕಛೇರಿಗೆ ಕರೆಸಿಕೊಂಡರು ಅಂತಾ ನುಡಿದಿರುತ್ತಾರೆ. ಮುಂದುವರೆದು ಮಂಜುನಾಥನು ಬಂದಾಗ ಆತನ ಬಳಿಯಲ್ಲಿ ಹಣ ಇರಲಿಲ್ಲ ಮತ್ತೆ ಫೋನ್ ಮಾಡಿ ಹಣ ಇದ್ದಂತಹ ಕವರ್‌ನ್ನು ತರಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಈ ವಿಷಯದ ಬಗ್ಗೆಯೂ ಸಹ ಪಾಟಿಸವಾಲು ಮಾಡಿರುವುದಿಲ್ಲ.

44.ಡಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಇವರ ಚಾಲಕನಿಗೆ ಫೋನ್ ಮಾಡಿ ತಾನು ಕರೆಸಿರುತ್ತೇನೆ ಅಂತಾ ಒಪ್ಪಿಕೊಂಡಿರುತ್ತಾರೆ. ಅಲ್ಲದೇ ಮಂಜುನಾಥ ಈತನು ಕಛೇರಿಗೆ ಬಂದಾಗ ದೂರುದಾರರು ಕೊಟ್ಟಂತಹ ಅರ್ಜಿ ಎಲ್ಲಿ ಎಂದು ಕೇಳಿದಾಗ ಆತನು ಅನುಪಮ ವೈನ್ಸ್ ಅಂಗಡಿನಲ್ಲಿ ಇಟ್ಟು ಹೋಗಿದ್ದೆ ಎಂದು ಹೇಳಿದ್ದು, ಆಗ ಲೋಕಾಯುಕ್ತ ಪೋಲಿಸರು ಆತನನ್ನು ಕರೆದುಕೊಂಡು ಹೋಗಿ ಅರ್ಧ ಗಂಟೆಯ ನಂತರ ಇವರ ಕಛೇರಿಗೆ ಬಂದಿರುತ್ತಾರೆ ಅಂತಾ ನುಡಿದಿರುತ್ತಾರೆ. ಮಂಜುನಾಥ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಅಬಕಾರಿ ಕಚೇರಿಯ ವಿಷಯ ನಿರ್ವಾಹಕರಾದ ರಾಜೇಶ್ವರಿ ಇವರು ತುರ್ತಾಗಿ ಕಛೇರಿಗೆ ಬರಲು ಹೇಳಿದ್ದು ಅದರಂತೆ ತಾನು ಕಛೇರಿಗೆ ಬಂದಿದ್ದು, ತನಿಖಾಧಿಕಾರಿಗಳು ಕವರ್‌ನ ಬಗ್ಗೆ ಕೇಳಿರುತ್ತಾರೆ ಅಂತಾ

ನುಡಿದಿರುತ್ತಾರೆ. ನಂತರ ಪೋಲಿಸರು ಇವರಿಗೆ ಅನುಪಮ ವೈನ್ಸ್ ಅಂಗಡಿಗೆ ಕರೆದುಕೊಂಡು ಹೋಗಿ ಅಲ್ಲಿಂದ ಕವರ್‌ನ್ನು ತೆಗೆದುಕೊಂಡು ಕಛೇರಿಗೆ ಬಂದಿರುತ್ತಾರೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಕಛೇರಿಯ ಒಳಗಡೆ ಬಂದಾಗ ದೂರುದಾರರು ಇನ್ನೊಂದು ಖಾಕಿ ಕವರ್‌ನ್ನು ಕೊಟ್ಟು ಅದನ್ನು ಇಟ್ಟುಕೊಳ್ಳಲು ಹೇಳಿದ್ದು, ಅದಕ್ಕೆ ಈತನು ನಿರಾಕರಿಸಿದಾಗ ಇವರಿಗೆ ಬೆದರಿಸಿ ಒತ್ತಾಯ ಪೂರ್ವಕವಾಗಿ ಇವರ ಜೇಬಿನಲ್ಲಿ ಇಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ. ಆದರೆ ಡಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಇವರ ಮುಂದೆಯೇ ಮಂಜುನಾಥ ಇವರ ಜೇಬಿಗೆ ಒಂದು ಕವರ್‌ನ್ನು ಇಟ್ಟಿದ್ದು, ಆತನೇ ಅದನ್ನು ಜೇಬಿನಿಂದ ಹೊರಗೆ ತೆಗೆಯುತ್ತಿದ್ದಂತೆ ಫೋಟೊವನ್ನು ತೆಗೆದುಕೊಂಡರು ಅದನ್ನು ನೋಡಲಾಗಿ ಅದರಲ್ಲಿ ಹಣ ಇತ್ತು ಅಂತಾ ನುಡಿದಿರುತ್ತಾರೆ. ಡಿ.ಡಬ್ಲ್ಯೂ.1 ಮತ್ತು 2 ಇವರ ಸಾಕ್ಷಿಯನ್ನು ಪರಿಶೀಲಿಸಿದಾಗ ಡಿ.ಡಬ್ಲ್ಯೂ.1 ಇವರು ಡಿ.ಡಬ್ಲ್ಯೂ.2 ಇವರಿಗೆ ಏಕೆ ಫೋನು ಮಾಡಿ ಕರೆಸಿಕೊಂಡಿರುತ್ತಾರೆ ಎನ್ನುವ ಬಗ್ಗೆ ವಿವರಣೆ ನೀಡಿರುವುದಿಲ್ಲ. ಅಲ್ಲದೇ ಡಿ.ಡಬ್ಲ್ಯೂ.2 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನ ಎರಡೂ ಕೈಗಳನ್ನು ದ್ರಾವಣದಲ್ಲಿ ತೊಳೆಸಿದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ.

45. ಡಿ.ಡಬ್ಲ್ಯೂ.1 ಇವರ ಪ್ರಕಾರ ದಿನಾಂಕ: 30/08/2014 ರಂದು ಮಧ್ಯಾಹ್ನ 2 ಗಂಟೆಗೆ ಚನ್ನರಾಯಪಟ್ಟಣವನ್ನು ಬಿಟ್ಟು ಹಾಸನಕ್ಕೆ ಹೋಗಿದ್ದು, ಅಲ್ಲಿ ಅಬಕಾರಿ ಜಂಟಿ ಆಯುಕ್ತರ ಪ್ರಗತಿ ಪರಿಶೀಲನಾ ಸಭೆಗೆ ಹಾಜರಾಗಿದ್ದು, ತರುವಾಗಿ ಅಬಕಾರಿ ಉಪ ಆಯುಕ್ತರಾದ ಹೂವಪ್ಪ ಗೌಡ ಇವರ ಬೀಳ್ಕೊಡುಗೆ ಸಮಾರಂಭಕ್ಕೆ ಹಾಜರಾಗಿದ್ದು, ರಾತ್ರಿ 8 ಗಂಟೆಗೆ ಚನ್ನರಾಯಪಟ್ಟಣಕ್ಕೆ ಬಂದಿರುತ್ತೇನೆ ಅಂತಾ ನುಡಿದಿರುತ್ತಾರೆ. ನಿ.ಪಿ.1 ಪ್ರಕಾರ ಆ.ಸ.ನೌ ರವರು ದಿನಾಂಕ: 30/08/2014 ರಂದು ಬೆಳಗ್ಗೆ 11 ಗಂಟೆಗೆ ಇವರ ಅಂಗಡಿಗೆ ಭೇಟಿ ನೀಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಈ ವಿಷಯದ ಬಗ್ಗೆ ಆ.ಸ.ನೌ ರವರು ಸಹ ಒಪ್ಪಿಕೊಂಡಿರುತ್ತಾರೆ. ನಿ.ಪಿ.1ರ ಪ್ರಕಾರ ಅದೇ ದಿವಸ ಸಂಜೆ 5 ಗಂಟೆಗೆ ಆ.ಸ.ನೌ ರವರ ಕಛೇರಿಗೆ ಬರಲು ಹೇಳಿದ್ದು ಅಂತಾ ನಮೂದು ಇರುತ್ತದೆ. ಆದರೆ ಆ.ಸ.ನೌ ರವರ ಪ್ರಕಾರ ಮೇಲೆ ಹೇಳಿದ ಹಾಗೆ ತಾನು ಹಾಸನಕ್ಕೆ

ಹೋಗಿದ್ದೆ ಅಂತ ಹೇಳಿರುತ್ತಾರೆ. ಆ.ಸ.ನೌ ರವರು ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಮಂಗಳೂರು ವಿಭಾಗದ ಆಗಸ್ಟ್-2014ನೇ ತಿಂಗಳ ದಿನಚರಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ.14 ಎಂದು ಗುರುತಿಸಲಾಗಿದ್ದು, ಅದರಲ್ಲಿ ಜಂಟಿ ಆಯುಕ್ತರ ಕಾರ್ಯಕ್ರಮದ ಬಗ್ಗೆ ವಿವರಣೆ ಇರುತ್ತದೆ. ಅದರ ಪ್ರಕಾರ ಬೆಳಗ್ಗೆ 6 ಗಂಟೆಯಿಂದ 10.30 ಗಂಟೆರವರೆಗೆ ಕಾರ್ಯಕ್ರಮದ ಬಗ್ಗೆ ನಮೂದು ಇರುತ್ತದೆ. ಇದರ ಪ್ರಕಾರ ಆ ದಿವಸ ಜಂಟಿ ಆಯುಕ್ತರು ಮಂಗಳೂರಿನಿಂದ ಹಾಸನಕ್ಕೆ ಪ್ರಯಾಣಿಸಿ, ಹಾಸನದಲ್ಲಿ ನಡೆದ ಮೈಸೂರು ವಿಭಾಗದ ಮಟ್ಟದ ಎಲ್ಲಾ ಅಬಕಾರಿ ಉಪ ಆಯುಕ್ತರ ಹಾಗೂ ಕೆ.ಎಸ್.ಬಿ.ಸಿ.ಎಲ್ ನ ಡಿಪೋವಿನ ಎಲ್ಲಾ ಅಬಕಾರಿ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ, ವಿಮರ್ಷಿಸಿ ನಿರ್ದೇಶನಗಳನ್ನು ನೀಡಲಾಯಿತು, ಹಾಸನದಲ್ಲಿ ವಾಸ್ತವ ಹೂಡಲಾಗಿತ್ತು ಅಂತಾ ನಮೂದು ಇರುತ್ತದೆ. ಆ.ಸ.ನೌ ರವರ ಪ್ರಕಾರ ಆ ದಿವಸ ಇವರಿಗೆ ನಿ.ಡಿ.11 ರಂತೆ ಪ್ರಸಂಸ ಪತ್ರವನ್ನು ನೀಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಆದರೆ ಯಾವ ಸಮಯದಿಂದ ಯಾವ ಸಮಯದವರೆಗೆ ಪ್ರಗತಿ ಪರಿಶೀಲನಾ ಸಭೆ ನಡೆಸಲಾಯಿತು ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದರಂತೆ ಹೂವಪ್ಪ ಗೌಡ ಇವರ ಆಗಸ್ಟ್-2014ನೇ ಮಾಹೆಯ ದಿನಚರಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ.15 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿ ಆ ದಿವಸ ಕರ್ತವ್ಯ ನಿರ್ವಹಿಸಿದ ಬಗ್ಗೆ ಹಾಗೂ ದಿನಾಂಕ: 31/08/2014 ರಂದು ವಯೋ ನಿವೃತ್ತಿ ಹೊಂದಲಿರುವ ಬಗ್ಗೆ ನಮೂದು ಇರುತ್ತದೆ. ಆದರೆ ದಿನಾಂಕ: 30/08/2014 ರ ಸಂಜೆ ಇವರ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದರೆ 3 ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಡಿ.12 ಎಂದು ಗುರುತಿಸಲಾಗಿದ್ದು, ಆದರೆ ಸದರಿ ಛಾಯಾಚಿತ್ರವು ದಿನಾಂಕ: 30/08/2014 ರಂದೇ ತೆಗೆಯಲಾಗಿದೆ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಅಲ್ಲದೇ ಆ.ಸ.ನೌ ರವರ ಪ್ರಕಾರ ಆ ದಿವಸ ತಮ್ಮ ಇಲಾಖಾ ಜೀಪಿನಲ್ಲಿ ಹಾಸನಕ್ಕೆ ಹೋಗಿದ್ದು, ಈ ಬಗ್ಗೆ ವಾಹನದ ಲಾಗ್ ಪುಸ್ತಕದ ನೋಟರೈಸ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ.19 ಎಂದು ಗುರುತಿಸಲಾಗಿದೆ. ಅದರಲ್ಲಿ ಇಲಾಖಾ ವಾಹನದ ನಂಬರ್ ಇರುವುದಿಲ್ಲ. ದಿನಾಂಕ: 30/08/2014 ರಂದು "ಟೌನ್ ಗಸ್ತಿ-

B

ಮುದ್ದೇನಹಳ್ಳಿ-ಹಾಸನ-ಚನ್ನರಾಯಪಟ್ಟಣ ಕೇಂದ್ರ ಸ್ಥಾನ 95 ಕಿ.ಮೀ. ಅಂತಾ ನಮೂದು ಇರುತ್ತದೆ. ಇದರಲ್ಲಿ ವರ್ಷವನ್ನು ತಿದ್ದುಪಡಿ ಮಾಡಲಾಗಿದ್ದು ಇರುತ್ತದೆ. ಅದರಲ್ಲಿ ಯಾವ ಸಮಯದಿಂದ ಯಾವ ಸಮಯದವರೆಗೆ ವಾಹನವನ್ನು ಉಪಯೋಗಿಸಲಾಗಿದೆ ಅಂತಾ ನಮೂದು ಇರುವುದಿಲ್ಲ. ಅಲ್ಲದೇ, ದಿನಾಂಕ: 08/08/2014 ಹಾಗೂ 29/08/2014 ನೇ ದಿನಾಂಕದಂದು ವಾಹನವನ್ನು ಚಲಿಸಿದ ರೀಡಿಂಗ್ ಅಂಕಿ ಸಂಖ್ಯೆಗಳನ್ನು ಸಹ ತಿದ್ದುಪಡಿ ಮಾಡಲಾಗಿರುತ್ತದೆ. ಇದರಿಂದ ಕಂಡುಬರುವುದೇನೆಂದರೆ ದಿನಾಂಕ: 30/08/2014 ರಂದು ವಾಹನವನ್ನು ಚಲಿಸಿದೆ ಅಂತಾ ತೋರಿಸಲು ಮೀಟರ್ ರೀಡಿಂಗ್‌ನ್ನು ತಿದ್ದಿರುತ್ತಾರೆ ಅಂತಾ ನನ್ನ ಅಭಿಪ್ರಾಯದಲ್ಲಿ ಸ್ಪಷ್ಟವಾಗಿ ತಿಳಿದುಬರುತ್ತದೆ. ಏಕೆ ತಿದ್ದುಪಡಿ ಮಾಡಲಾಗಿರುತ್ತದೆ ಎನ್ನುವ ಬಗ್ಗೆ ಆ.ಸ.ನೌ ರವರು ವಿವರಣೆಯನ್ನು ನೀಡಿರುವುದಿಲ್ಲ. ಡಿ.ಡಬ್ಲ್ಯೂ.2 ಮಂಜುನಾಥ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಇನ್ನೋವಾ ವಾಹನದಲ್ಲಿ ಹೋಗಿರುತ್ತೇವೆ ಅಂತಾ ನುಡಿದಿದ್ದು, ಇಲಾಖಾ ಜೀಪಿನಲ್ಲಿ ಹೋಗಿದ್ದ ಬಗ್ಗೆ ನುಡಿದಿರುವುದಿಲ್ಲ.

46. ಡಿ.ಡಬ್ಲ್ಯೂ.1 ಇವರು ತಮ್ಮ ಸಮಜಾಯಿಷಿಯಲ್ಲಿ "ದಿನಾಂಕ: 30/08/2014 ರಂದು ಗಸ್ತು ನಡೆಸಿದ್ದು, ಗಿರೀಶ್ ರವರು ರೇಣುಕಾಂಬ ರಸ್ತೆಯಲ್ಲಿರುವ ಕದಂಬ ಬಾರ್ ಸಿಎಲ್-9 ಸನ್ನದು ಕಟ್ಟಡವನ್ನು ಖಾಲಿ ಮಾಡಬೇಕಾಗಿದ್ದು, ಸನ್ನದನ್ನು ಮುಚ್ಚಲು ಅನುಮತಿ ನೀಡುವಂತೆ ಅರ್ಜಿ ಕೊಡುತ್ತೇನೆ ಅಂತಾ ತಿಳಿಸಿ ಆ ಕಟ್ಟಡದ ಹಿಂಭಾಗ ಸ್ಥಳಾಂತರಿಸಲು ಇರುವ ಕಟ್ಟಡ ತೋರಿಸಿರುತ್ತಾರೆ. ಕಛೇರಿಗೆ ಬಂದು ಅವರಿಗೆ ಅವರೇ ಲಕ್ಷಗಳಲ್ಲಿ ಮಾತನಾಡಿಕೊಂಡು ಆಮಿಷ ಒಡ್ಡಲು ಮಾತನಾಡಿಕೊಂಡಿರುತ್ತಾರೆ. ನಾನು ಅವರಿಗೆ ಹಣ ನೀಡುವಂತೆ ಕೋರಿರುವುದಿಲ್ಲ ಅಂತಾ ಹೇಳಿರುತ್ತಾರೆ". ಆದರೆ ದೂರುದಾರರನ್ನು ಆಮಿಷ ಒಡ್ಡಿರುತ್ತಾರೆ ಅಂತಾ ಹಾಗೂ ತನ್ನ ಮೇಲೆ ಸುಳ್ಳು ಕೇಸನ್ನು ಮಾಡಿರುತ್ತಾರೆ ಅಂತಾ ಹೇಳಿ ಆ.ಸ.ನೌ ರವರು ದೂರುದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಸಲ್ಲಿಸಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೇ, ತಮ್ಮ ಸಮಜಾಯಿಷಿಯಲ್ಲಿ ತಾನು ದಿನಾಂಕ: 30/08/2014 ರಂದು ಸಂಜೆ

ಚನ್ನರಾಯಪಟ್ಟಣದಲ್ಲಿ ಇರಲಿಲ್ಲ ಹಾಸನದಲ್ಲಿ ಇದ್ದೆ ಎನ್ನುವ ವಿಷಯದ ಬಗ್ಗೆ ತನ್ನ ಸಮಜಾಯಿಷಿಯಲ್ಲಿ ತಿಳಿಸಿರುವುದಿಲ್ಲ.

47. ಶಿಸ್ತು ಪ್ರಾಧಿಕಾರದ ಪ್ರಕಾರ ದಿನಾಂಕ: 04/09/2014 ರಂದು ದೂರುದಾರರು ಆ.ಸ.ನೌ ರವರ ಕಛೇರಿಗೆ ಹೋಗಿದ್ದು, ಅಲ್ಲಿ ದೂರುದಾರ ಹಾಗೂ ಆ.ಸ.ನೌ ರವರ ನಡುವೆ ಲಂಚದ ಹಣ ಬೇಡಿಕೆ ಇಟ್ಟ ಬಗ್ಗೆ ಮಾತನಾಡಿದ್ದು, ಅದನ್ನು ತನ್ನ ಮೊಬೈಲ್‌ನಲ್ಲಿ ದಾಖಲಿಸಿಕೊಂಡಿರುತ್ತಾರೆ ಅಂತಾ ವಾದ ಇರುತ್ತದೆ. ಈ ಬಗ್ಗೆ ಆ.ಸ.ನೌ ರವರು ತಮ್ಮ ಸಮಜಾಯಿಷಿಯಲ್ಲಿ ಆ ದಿವಸ ದೂರುದಾರರು ತನ್ನ ಕಛೇರಿ ಒಳಗಡೆ ಬಂದಿದ್ದು, ಅವರು ಮೊಬೈಲ್‌ನಲ್ಲಿ ಕೆಲವು ಚಿತ್ರಗಳನ್ನು ನೋಡುತ್ತಿದ್ದು, ಅವರಿಗೆ ಕಛೇರಿಯಲ್ಲಿ ಈ ರೀತಿ ಮಾಡಬಾರದು ಎಂದು ತಿಳಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ಈ ವಿಷಯವನ್ನು ಪರಿಗಣಿಸಿದಾಗ ದೂರುದಾರರು ಮೊಬೈಲ್‌ನ್ನು ತಂದಿದ್ದ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಅಲ್ಲದೇ ತನ್ನ ಪಾಟಿಸವಾಲಿನಲ್ಲಿ "ನಾನು ದೂರುದಾರರನ್ನು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವುದು ದೂರುದಾರರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನ ಲಿಖಿತ ಸಮಜಾಯಿಷಿಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನುಡಿದಿರುತ್ತಾರೆ ಅವರಷ್ಟಕ್ಕೆ ಅವರು ಮಾತನಾಡಿಕೊಂಡು ರೆಕಾರ್ಡ್ ಮಾಡಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ". ಇದರಿಂದ ಕಂಡುಬರುವ ವಿಷಯವೇನೆಂದರೆ ಆ ದಿವಸ ದಿನಾಂಕ: 04/09/2014 ರಂದು ದೂರುದಾರ ಹಾಗೂ ಆ.ಸ.ನೌ ರವರ ನಡುವೆ ಸಂಭಾಷಣೆ ದಾಖಲಾಗಿತ್ತು ಅಂತಾ ಕಂಡುಬರುತ್ತದೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಆ.ಸ.ನೌ ರವರು ಲಂಚದ ಹಣದ ಬೇಡಿಕೆ ಇಟ್ಟ ಬಗ್ಗೆ ಅಲ್ಲಗಳೆಯುವಂತಿಲ್ಲ. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿದ್ದು, ಅದರಲ್ಲಿ ಕೆಲವೊಂದು ತೀರ್ಪುಗಳ ಬಗ್ಗೆ ಉಲ್ಲೇಖಿಸಿದ್ದು, ಸದರಿ ತೀರ್ಪುಗಳಲ್ಲಿ ಇರುವ ಒಂದು ತತ್ವ ಏನೆಂದರೆ burden to prove charges in a domestic enquiry always lies on the employer unless the delinquent employee admist the charge. There is no presumption of guilt against him. Mere failure of the delinquent to lead evidence in defence cannot be ground for holding in guilty,

unless the employer/disciplinary authority provides positive evidence to establish the charge. ಈ ಮೇಲೆ ಚರ್ಚಿಸಿದಂತೆ ನನ್ನ ಅಭಿಪ್ರಾಯದಲ್ಲಿ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಅಂಶ–1ನ್ನು ರುಜುವಾತುಪಡಿಸಿರುತ್ತಾರೆ.

48. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

49. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ **ಶ್ರೀ. ಜ್ಞಾನಪ್ರಕಾಶ,** ಅಬಕಾರಿ ನಿರೀಕ್ಷಕರು, ಚನ್ನರಾಯಪಟ್ಟಣ ವಲಯ, ಹಾಸನ ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌರವರ ನಿವೃತ್ತಿ ದಿನಾಂಕ: 31/05/2036 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

Boudesi 19/7

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. M Girish S/o Masthigowda, Kuvempunagar, Channarayapattana. |
| | **PW-2** | Sri. Diwakar N S/o Neelappa K.N, Staff Nurse, HIMS Hospital, Hassan. |
| | **PW-3** | Sri. Shanthinath Vennur S/o Jinnappa, PI, Shanthigrama, Hassan. |
| 2 | **Documents marked on behalf of the Disciplinary Authority Ex.P-1 to Ex.P-23** | |
| | **Ex.P.1** | Complaint given to Police Inspector, KLA, Hassan. |
| | **Ex.P.2 & 2(a)** | List of currency note numbers with signature. |
| | **Ex.P.3, 3(a) & 3(b)** | Mahazar with signatures. |
| | **Ex.P.4, 4(a) & 4(b)** | Letter dtd: 04/09/2014 addressed to PI, KLA, Hassan with signatures. |
| | **Ex.P.5 & 5(a)** | Statement of DGO with signature. |
| | **Ex.P.6, 6(a) & 6(b)** | Trap mahazar. |
| | **Ex.P.7** | Xerox copy of Photographs. |
| | **Ex.P.8** | Xerox copy of Photographs. |
| | **Ex.P.9 &** | FIR with Signature. |

| | | |
|---|---|---|
| | 9(a) | |
| | **Ex.P. 10** | Letter dtd: 03/09/2014 addressed to District Hospital, Hassan. |
| | **Ex.P. 11** | Official Memorandum dtd: 03/09/2014. |
| | **Ex.P. 12 & 12(a)** | Sketch map with signature. |
| | **Ex.P. 13 & 13(a)** | Documents pertaining to DGO with signature. |
| | **Ex.P. 14** | Statement of complainant. |
| | **Ex.P. 15 & 15(a)** | Photo suspension mahazar with signature. |
| | **Ex.P. 16** | Letter dtd: 08/09/2014 addressed to Excise Commissioner, Bengaluru. |
| | **Ex.P. 17** | Letter dtd: 29/09/2014 addressed to Manager, SBM, Channarayapatna. |
| | **Ex.P. 18** | Letter dtd: 09/10/2014 addressed to PI, KLA, Channarayapatna. |
| | **Ex.P. 19** | Further statement of complainant. |
| | **Ex.P. 20** | Letter dtd: 15/12/2014 addressed to PI, KLA, Hassan. |
| | **Ex.P. 21** | Sketch map. |
| | **Ex.P. 22** | Chemical Test Report. |
| | **Ex.P. 23** | Letter dtd: 20/06/2015 addressed to PI, KLA, Hassan. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Jnanaprakash B, Excise Inspector, Nagamangala Range, Mandya. |

| | | |
|---|---|---|
| | **DW-2** | Sri. Manjunath S/o Mallesh, Driver, Channarayapatna. |
| | **DW-3** | Sri. Manjunath Y.N, Cashier, Anupama Wines, Channarayapatna. |
| 4 | **Documents marked on behalf of the DGOs through the complainant** | |
| | **Ex.D.1** | FIR. |
| | **Ex.D.2** | Mahazar. |
| | **Ex.D.3** | List of seized documents. |
| | **Ex.D.4** | Remand application. |
| | **Ex.D.5** | Office memorandum dtd: 18/08/2014. |
| | **Ex.D.6** | Letter dtd: 01/09/2014 addressed by DGO. |
| | **Ex.D.7** | Copy of items register of Kadamba Bar & Restaurant. |
| | **Ex.D.8** | Copy of items register of Kadamba Bar & Restaurant. |
| | **Ex.D.9** | Copy of items register of Kadamba Bar & Restaurant. |
| | **Ex.D. 10 & Ex.D. 12** | Copy of colour photographs. |
| | **Ex.D. 11** | Letter of appreciation. |
| | **Ex.D. 13** | Notification dtd: 11/12/2013 issued by Finance Department (Excise) with enclosures. |
| | **Ex.D. 14** | August 2014th Monthly Dairy of Sri. S.L Rajendra Prasad, Joint Commissioner of Excise. |
| | **Ex.D.** | August 2014th Monthly Dairy of Sri. B.V |

| | | |
|---|---|---|
| | 15 | Hoovappagowda, Dy. Commissioner of Excise. |
| | **Ex.D. 16** | Copy of movement register of Excise Inspector, Channarayapatna. |
| | **Ex.D. 17** | Letter dtd: 11/09/2014 addressed to Excise Inspector, Channarayapatna. |
| | **Ex.D. 18** | Letter dtd: 11/09/2014 addressed to Deputy Commissioner of Excise, Hassan. |
| | **Ex.D. 19** | Copy of log book. |

Dated this the 19th July, 2022

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.

**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/260/2016/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 20th July, 2022.

## RECOMMENDATION

Sub: Departmental Inquiry against Shri Jnanaprakash, Excise Inspector, Channarayapatana Range, Hassan District-reg.,

Ref: 1) Government Order No.ಆಇ 51 ಇಪಿಎಸ್ 2016, Bengaluru, dated: 11/07/2016.

2) Nomination Order No.UPLOK-2/DE/260/2016, Bengaluru, dated: 23/07/2016 of Upalokayukta, State of Karnataka, Bengaluru.

3) Inquiry Report dated: 19/07/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 11/07/2016 initiated the disciplinary proceedings against Shri Jnanaprakash, Excise Inspector, Channarayapatana Range, Hassan District (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/260/2016, Bengaluru, dated: 23/07/2016 nominated Additional Registrar of Enquiries-1, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently, by Order No.UPLOK-2/DE/2017, Bengaluru, dated:04/07/2017, the Additional Registrar of Enquiries-7, Karnataka Lokayukta, Bengaluru was re-nominated as Inquiry Officer to conduct Departmental Inquiry against DGO. Again, by Order No.UPLOK-1 & 2/DE/Transfers/2018, Bengaluru, dated: 06/08/2018, the Additional Registrar of Enquiries-14, Karnataka Lokayukta, Bengaluru was re-nominated as Inquiry Officer to conduct Departmental Inquiry against DGO.

3. The DGO, Shri Jnanaprakash, Excise Inspector, Channarayapatana Range, Hassan District was tried for the following charges:

**ANNEXURE-1**
**CHARGE**

You DGO Sri. Jnanaprakash, while working as Excise Inspector, Channarayapatna, Hassan District (hereinafter called as Delinquent Government Official [DGO] for short) had demanded bribe of Rs.10,00,000/- from Sri. H.M Girish S/o Masthigowda, Prop: Kadamba Bar, Channarayapatna on 30/08/2014 for not registering case against him in respect of liquor bottles

in his Kadamba Bar and after negotiation, you had agreed to receive Rs.2,00,000/- for the said purpose and again on 04/09/2014 you demanded and accepted bribe of Rs.2,00,000/- from him by asking him to handover the amount to your jeep driver Sri. Manjunath near Old Bus-stand, Channarayapatna and therefore you the DGO has failed to maintain absolute integrity and devotion to duty and committed an act which is unbecoming of a Government Servant and therefore you are guilty of committing misconduct under Rule 3(1)(i) to (iii) of KCS (Conduct) Rules 1966. Hence, this charge.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has 'Proved' the charges leveled against DGO, Shri Jnanaprakash, Excise Inspector, Channarayapatana Range, Hassan District.

5. On perusal of the Inquiry Report, in order to prove the guilt of the DGO, the Disciplinary Authority has examined three witnesses i.e., PW-1 to PW-3 and Ex. P-1 to P-23 documents were got marked. In fact, DGO was examined himself as DW-1 and also examined another two witnesses on behalf of him as DW-2 and DW-3 and Ex. D-1 to D-19 documents were got marked.

6. The Disciplinary Authority has produced sufficient materials and established the surrounding circumstances. In-fact, the presence of the DGO and also his driver DW-2, Shri Manjunath

has been admitted as present at the spot and the receipt of the money by Shri Manjunath on behalf of DGO is also clearly established. The amount is not a meager amount, the demand was for Rs.10 lakhs and acceptance of the money was Rs.2 lakhs, which is a huge amount. The DW-1 (DGO) has also not denied his presence at the spot, but he gave some explanation that, he came from some other place. He has not given any explanation with regard to the recovery of the amount by the police through Shri Manjunath. Apart from the above, DW-3, owner of Anupama Wines has also supported the case. In-fact, all the above said factual aspects and the legal aspects have been properly considered by the Inquiry Officer. There is no reason to deviate from the observation made by the Inquiry Officer.

7. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.
8. As per the First Oral Statement of DGO furnished by the Inquiry Officer, DGO, Shri Jnanaprakash will retire from service on 31/05/2036.

9. Having regard to the nature and seriousness of the charge 'Proved' against DGO, Shri Jnanaprakash, Excise Inspector, Channarayapatana Range, Hassan District and on consideration of the totality of circumstances:-

> "It is hereby recommended to the Government to impose penalty of dismissal from service to DGO, Shri Jnanaprakash, Excise Inspector, Channarayapatana Range, Hassan District".

10. Action taken in the matter shall be intimated to this Authority.

Connected records are enclosed herewith.

28/7/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.